# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಮಂಗಳವಾರ, ಆಗಸ್ಟ್ 20, 2024

ಸಂಪುಟ : 51 ಸಂಚಿಕೆ : 98 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ರಾಜ್ಯಪಾಲರ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

### ನಾವೆಲ್ಲಾ ಒಗ್ಗಟ್ಟಾಗಿ ಸಿಎಂ ಪರ ಇದ್ದೇವೆ ಎಂದ ಸಂಸದೆ ಡಾ.ಪ್ರಭಾ, ಶಾಸಕ ಎಸ್ಸೆಸ್

ದಾವಣಗೆರೆ, ಆ.19- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು ಅನುಮತಿ ನೀಡಿದ್ದನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ರಾಜ್ಯಪಾಲರ ವಿರುದ್ಧ ಘೋಷಣೆ ಕೂಗಿದರು. ಥಾವರಚಂದ್ ಗೆಹಲೋಟ್ ಅವರ ಪ್ರತಿಕೃತಿ ನಿರ್ಮಿಸಿ ಹೆಗಲಮೇಲೆ ಹೊತ್ತು ಮಂಡಕ್ಕಿ ತೂರಿದರು.

ಅಂಬೇಡ್ಕರ್ ವೃತ್ತದಿಂದ ಗಾಂಧಿ ವೃತ್ತದವರೆಗೆ ಮೆರವಣಿಗೆ ನಡೆಸಿ, ಬಾಯಿ ಬಡಿದುಕೊಂಡರು. ನಂತರ ಅಣಕು ಶವ ಸುಡಲು ಮುಂದಾದ ಪ್ರತಿಭಟನಕಾರರನ್ನು ಪೊಲೀಸರು ತಡೆದರು. ಈ ವೇಳೆ ಪೊಲೀಸರೊಂದಿಗೆ ವಾಗ್ವಾದ ನಡೆಯಿತಾದರೂ, ಪೊಲೀಸರು ಅವಕಾಶ ನೀಡಲಿಲ್ಲ.

**ಥಾವರಚಂದ್ ಗೆಹ್ಲೋಟ್ ಪ್ರತಿಕೃತಿ ಮೆರವಣಿಗೆ**

**ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಆಕ್ರೋಶ**

**ಪ್ರಾಸಿಕ್ಯೂಷನ್ ರದ್ದುಪಡಿಸುವಂತೆ ಆಗ್ರಹ**

ಮಹಾತ್ಮಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರಾಸಿಕ್ಯೂಷನ್ ರದ್ದುಪಡಿಸಬೇಕು. ರಾಜ್ಯಪಾಲರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಲಾಯಿತು. ಪ್ರತಿಭಟನೆ ಸಂದರ್ಭದಲ್ಲಿ ಮಾತನಾಡಿದ ಸಂಸದೆ (2ನೇ ಪುಟಕ್ಕೆ)

### ಸಿದ್ಧರಾಮಯ್ಯ ಯಾವಾಗಲೂ ಸಿದ್ಧ ಹಸ್ತರು: ಶಾಸಕ ಎಸ್ಸೆಸ್

**ದಾವಣಗೆರೆ, ಆ. 19- ಮುಡಾ ಬದಲಿ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ. ಅವರು ರಾಜೀನಾಮೆ ಕೊಡುವ ಅಗತ್ಯವೂ ಇಲ್ಲ ಎಂದು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಹೇಳಿದರು. ರಾಜ್ಯಪಾಲರ ನಡೆ ವಿರುದ್ಧ ಇಂದು ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಹಾಗೂ ಎಲ್ಲಾ ಶಾಸಕರು ಸಿದ್ಧರಾಮಯ್ಯನವರಿಗೆ ಬೆಂಬಲವಾಗಿ ನಿಂತಿದ್ದೇವೆ. ಸರ್ಕಾರ ಕೆಡವಲು ಯಾರಿಂದಲೂ ಸಾಧ್ಯವಿಲ್ಲ ಎಂದರು. ಸಿದ್ಧರಾಮಯ್ಯನವರು ಯಾವಾಗಲೂ ಸಿದ್ಧ ಹಸ್ತರು. ಏನಾದರೂ** (2ನೇ ಪುಟಕ್ಕೆ)

## ಮುಡಾ ವಿಚಾರಣೆ ಆ.29ಕ್ಕೆ ಮುಂದೂಡಿದ ಹೈಕೋರ್ಟ್

# ಸಿಎಂಗೆ ತಾತ್ಕಾಲಿಕ ರಿಲೀಫ್

ಬೆಂಗಳೂರು, ಆ. 19 - ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದ ವಿಚಾರಣೆಯನ್ನು ರಾಜ್ಯ ಹೈಕೋರ್ಟ್ ಈ ತಿಂಗಳ 29ಕ್ಕೆ ಮುಂದೂಡಿದೆ.

ಅಷ್ಟೇ ಅಲ್ಲ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ನಾಳೆ ತನ್ನ ತೀರ್ಪನ್ನು ಪ್ರಕಟಿಸದಂತೆ ಹಾಗೂ ಈ ತಿಂಗಳ 29ರವರೆಗೂ ವಿಚಾರಣೆ ಮುಂದೂಡುವಂತೆ ಸೂಚಿಸಿದೆ. ಇದರಿಂದಾಗಿ ಮುಖ್ಯಮಂತ್ರಿಗಳಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಂತಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರು ಅಕ್ರಮವಾಗಿ 14 ನಿವೇಶನ ಪಡೆದಿದ್ದಾರೆ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ತಮ್ಮ ವಿರುದ್ಧ ತನಿಖೆಗೆ ಅನುಮತಿ



ನೀಡಿರುವುದನ್ನು ಸಿದ್ದರಾಮಯ್ಯ ಹೈಕೋರ್ಟ್‌ನಲ್ಲಿ ಇಂದು ಪ್ರಶ್ನಿಸಿದ್ದರು.

ಸಿದ್ದರಾಮಯ್ಯ ಪರ ವಕಾಲತ್ತು ವಹಿಸಿರುವ ಶತಬಿಷ ಶಿವಣ್ಣ ಇಂದು ಬೆಳಗ್ಗೆ ಜನಪ್ರತಿನಿಧಿಗಳ ವಿರುದ್ಧದ ಅರ್ಜಿಗಳ ವಿಚಾರಣೆ ನಡೆಸುವ ನ್ಯಾಯ ಮೂರ್ತಿ ಎಂ.ನಾಗಪ್ರಸನ್ನ ಅವರ ವಿಶೇಷ ನ್ಯಾಯ ಪೀಠದ ಮುಂದೆ ಅರ್ಜಿ ವಿಚಾರಣೆಗೆ ಬಂದಿತು.

ಮುಖ್ಯಮಂತ್ರಿ ಪರ ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದರೆ, ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ ಅಲ್ಲದೆ, ಪ್ರತಿವಾದಿಗಳ ಪರ ಘಟಾನುಘಟಿ ವಕೀಲರಾದ ರಂಗನಾಥ್ ರೆಡ್ಡಿ, ಪ್ರಭುಲಿಂಗ ನಾವಡಗಿ, ಲಕ್ಷ್ಮಿ ಐಯ್ಯಂಗಾರ್ ಮತ್ತಿತರರು ವಾದ ಮಂಡಿಸಿದರು.

ಇದಕ್ಕೂ ಮುನ್ನ ಮುಖ್ಯಮಂತ್ರಿ ಪರ ವಾದ ಮಂಡಿಸಿದ ಸಿಂಘ್ವಿ, ಪ್ರಕರಣದಲ್ಲಿ ಸಂವಿಧಾನಾತ್ಮಕ ಮತ್ತು ಆಡಳಿತಾತ್ಮಕ ವಿಚಾರಗಳಿವೆ, ಆಗಸ್ಟ್ 20ರಂದು ಜನಪ್ರತಿನಿಧಿಗಳ ನ್ಯಾಯಾಲಯದ ಮುಂದೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ಬಾಕಿ ಇದೆ ಎಂದು ಹೇಳಿದರು.

ರಾಜ್ಯಪಾಲರು ಇದ್ಯಾವುದನ್ನೂ ಗಮನಕ್ಕೆ ತೆಗೆದುಕೊಂಡಿಲ್ಲ, ಅಲ್ಲದೆ, ರಾಜ್ಯ ಸಚಿವ ಸಂಪುಟ ಸಭೆ ತೆಗೆದುಕೊಂಡಿರುವ ತೀರ್ಮಾನಕ್ಕೂ ಸುದೀರ್ಘ ಸ್ಪಷ್ಟನೆ ನೀಡಿಲ್ಲ. ರಾಜ್ಯಪಾಲರು ಯಾವ ಆಧಾರದ ಮೇಲೆ ಮುಖ್ಯಮಂತ್ರಿಗಳ (2ನೇ ಪುಟಕ್ಕೆ)

## ಸಿದ್ದರಾಮಯ್ಯ ತನಿಖೆ: ಪರ-ವಿರುದ್ಧ ಪ್ರತಿಭಟನೆ

ಬೆಂಗಳೂರು, ಆ. 19 - ಮುಡಾ ಬಿಡಿ ನಿವೇಶನಗಳ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಆದೇಶ ನೀಡಿದ ಬೆನ್ನಲ್ಲೇ ಮುಖ್ಯಮಂತ್ರಿ ಪರ ಹಾಗೂ ವಿರುದ್ಧ ಧರಣಿ ಪ್ರತಿಭಟನೆ, ಮುತ್ತಿಗೆ ಯತ್ನಗಳು ರಾಜ್ಯಾದ್ಯಂತ ಇಂದು ನಡೆದವು.

**ರಾಜ್ಯಪಾಲರ ನಿರ್ಧಾರ ಸ್ವಾಗತಿಸಿ ಬಿಜೆಪಿ-ಜೆಡಿಎಸ್ ಶಾಸಕರಿಂದ ವಿಧಾನಸೌಧದ ಮಹಾತ್ಮಗಾಂಧಿ ಪ್ರತಿಮೆ ಬಳಿ ಧರಣಿ, ಮುಖ್ಯಮಂತ್ರಿ ರಾಜೀನಾಮೆಗೆ ಆಗ್ರಹ**

**ರಾಜ್ಯಪಾಲರ ನಿಲುವನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರಿಂದ ರಾಜಭವನ ಮುತ್ತಿಗೆ ಯತ್ನ, ರಾಜ್ಯದಾದ್ಯಂತ ಪ್ರತಿಭಟನೆ**

ರಾಜ್ಯಪಾಲರ ನಿರ್ಧಾರವನ್ನು ಸ್ವಾಗತಿಸಿ ಬಿಜೆಪಿ-ಜೆಡಿಎಸ್ ಶಾಸಕರು ಮತ್ತು ಕಾರ್ಯಕರ್ತರು ವಿಧಾನಸೌಧದ ಮಹಾತ್ಮಗಾಂಧಿ ಪ್ರತಿಮೆ ಬಳಿ ಧರಣಿ ನಡೆಸಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿದರು.

ಮತ್ತೊಂದೆಡೆ ಕಾಂಗ್ರೆಸ್‌ನ ಸಚಿವರು, ಜನಪ್ರತಿನಿಧಿಗಳು, ಕಾರ್ಯಕರ್ತರು ರಾಜ್ಯಪಾಲರ ನಿಲುವಿನ ಬಗ್ಗೆ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯಪಾಲರ ನಿಲುವನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ರಾಜಭವನ ಮುತ್ತಿಗೆಗೂ ಮುಂದಾದರು.

ಪ್ರದೇಶ ಕಾಂಗ್ರೆಸ್ ಕರೆ ಮೇರೆಗೆ ಕೇವಲ ರಾಜಧಾನಿ ಅಷ್ಟೇ ಅಲ್ಲದೆ, ರಾಜ್ಯಾದ್ಯಂತ ಕೇಂದ್ರ ಸರ್ಕಾರ ಹಾಗೂ ರಾಜ್ಯಪಾಲರ ವಿರುದ್ಧ ಪ್ರತಿಭಟನೆಗಳು ನಡೆದವು.

ಫ್ರೀಡಂ ಪಾರ್ಕ್‌ನಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ, ಸಿದ್ದರಾಮಯ್ಯ ಸಂಪುಟದ ಹಲವು ಸದಸ್ಯರು ಹಾಗೂ ಪಕ್ಷದ ಕಾರ್ಯಕರ್ತರು ಭಾಗವಹಿಸಿ, ಸಂವಿಧಾನ (4ನೇ ಪುಟಕ್ಕೆ)

## ಬ್ಯಾಂಕುಗಳು ಠೇವಣಿ ಹೆಚ್ಚಿಸಲು ಸೀತಾರಾಮನ್ ಸೂಚನೆ

ನವದೆಹಲಿ, ಆ. 19 - ಸಾರ್ವಜನಿಕ ವಲಯದ ಬ್ಯಾಂಕುಗಳು ತಮ್ಮ ಠೇವಣಿ ಬೆಳವಣಿಗೆ ಸುಧಾರಿಸಿಕೊಳ್ಳಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಹೇಳಿದ್ದಾರೆ.

ಕಳೆದ ಕೆಲ ತಿಂಗಳಲ್ಲಿ ಠೇವಣಿ ಬೆಳವಣಿಗೆ ಪ್ರಮಾಣ ಸಾಲದ ಬೆಳವಣಿಗೆಗಿಂತ ಕಡಿಮೆ ಇದೆ. ಇದರಿಂದ ಆಸ್ತಿ ಹಾಗೂ ಹೊಣೆಗಾರಿಕೆಗಳಲ್ಲಿ ವ್ಯತ್ಯಾಸವಾಗುತ್ತಿದೆ.

## 3 ಕೋಟಿ ರೂ. ವಾಚುಗಳ ಕಳ್ಳತನ, ಇಬ್ಬರು ಪೊಲೀಸರ ಅಮಾನತ್ತು

ಗಾಜಿಯಾಬಾದ್, ಆ. 19 - ಇಲ್ಲಿನ ಸಿಐಎಸ್‌ಎಫ್ ರಸ್ತೆಯಲ್ಲಿ ಎರಡು ಪೊಲೀಸ್ ಚೌಕಿಗಳ ನಡುವೆ ಇರುವ ಶೋರೂಂನಲ್ಲಿ ಮುಸುಕು ಧರಿಸಿದ ವ್ಯಕ್ತಿಗಳು 3 ಕೋಟಿ ರೂಪಾಯಿ ಮೌಲ್ಯದ ಬ್ರಾಂಡೆಡ್ ವಾಚುಗಳನ್ನು ಕದ್ದಿದ್ದಾರೆ. ಘಟನೆಯ ನಂತರ ಇಬ್ಬರು ಪೊಲೀಸರನ್ನು ಅಮಾನತ್ತುಗೊಳಿಸಲಾಗಿದೆ. ಎಂಟರಿಂದ ಹತ್ತು ಮುಸುಕುಧಾರಿಗಳು ಶಿಪ್ರ ಹಾಗೂ ಕನವನಿ ಠಾಣೆಗಳ ನಡುವೆ ಇದ್ದ ಶೋರೂಮ್ ಲೂಟಿ ಮಾಡಿದ್ದಾರೆ. ಅರ್ಧ ಗಂಟೆಯಲ್ಲಿ ಅವರು ಐದು ಚೀಲಗಳಲ್ಲಿ ಎಲ್ಲಾ ಗಡಿಯಾರಗಳನ್ನು ತುಂಬಿಕೊಂಡು ಪರಾರಿಯಾಗಿದ್ದಾರೆ. ಅಪರಾಧದ ದೃಶ್ಯಗಳು ಅಂಗಡಿಯಲ್ಲಿದ್ದ ಹಾಗೂ ನೆರೆಹೊರೆಯ ಪ್ರದೇಶಗಳಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿವೆ.

## ಶಿವಮೊಗ್ಗ : ಝೀಕಾ ವೈರಸ್ ಸೋಂಕಿತನ ಸಾವು

ಬೆಂಗಳೂರು, ಆ. 19 - ಶಿವಮೊಗ್ಗದ ಗಾಂಧಿನಗರ ನಿವಾಸಿ 74 ವರ್ಷದ ವೃದ್ಧರೊಬ್ಬರು ಝೀಕಾ ವೈರಾಣು ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಇದು ರಾಜ್ಯದಲ್ಲಿ ಝೀಕಾ ವೈರಸ್ ಸೋಂಕಿತನ ಮೊದಲ ಸಾವು.

ತೀವ್ರ ಜ್ವರದಿಂದ ಬಳಲುತ್ತಿದ್ದ ಅವರು ಜೂನ್ ತಿಂಗಳಲ್ಲಿ ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿ ಮನೆಗೆ ಮರಳಿದ್ದರು. ಕೆಲ ದಿನಗಳ ಬಳಿಕ ಅವರಿಗೆ ಝೀಕಾ ವೈರಾಣು ಬಾಧಿಸಿರುವುದು ದೃಢಪಟ್ಟಿತ್ತು. ಜುಲೈ ತಿಂಗಳಲ್ಲಿ ಮೃತಪಟ್ಟಿದ್ದರು.

ಗಂಭೀರ ಸ್ವರೂಪದ ಕಾಯಿಲೆಯಿಂದ ಬಳಲುತ್ತಿದ್ದ ಮೃತರಿಗೆ ಝೀಕಾ ವೈರಾಣು ಸೋಂಕು ಸಹ ತಗುಲಿತ್ತು ಎಂಬುದು ಮರಣದ ಆಡಿಟ್ ವರದಿಯಲ್ಲಿ ಖಚಿತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಕೇಂದ್ರ ಸರ್ಕಾರದ ಆಸ್ಪತ್ರೆಗಳಲ್ಲಿ ಭದ್ರತೆ ಹೆಚ್ಚಳ

ನವದೆಹಲಿ, ಆ. 19 - ಕೇಂದ್ರ ಸರ್ಕಾರದ ಆಸ್ಪತ್ರೆಗಳಲ್ಲಿ ಭದ್ರತಾ ನಿಯೋಜನೆಯನ್ನು ಶೇ.25 ರಷ್ಟು ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಭದ್ರತಾ ಶಿಷ್ಟಾಚಾರಗಳನ್ನು ರೂಪಿಸುವ ಜೊತೆಗೆ, ಆಸ್ಪತ್ರೆಗಳ ಬೇಡಿಕೆಯ ಮೇರೆಗೆ ಮಾರ್ಷಲ್‌ಗಳನ್ನು ಸಹ ನಿಯೋಜಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

## ಎಣ್ಣೆ ಗಾಣದ ಯಶಸ್ವಿ ಉದ್ಯಮಿ ನಳಿನಿ

### ದಾವಣಗೆರೆ ನಗರದ ಚಾರ್ವಿ ಮಹಿಳಾ ಸಂಘಕ್ಕೆ ರಾಷ್ಟ್ರೀಯ ಪ್ರಶಸ್ತಿ

ದಾವಣಗೆರೆ, ಆ. 19 - ನಗರದ ಚಾರ್ವಿ ಮಹಿಳಾ ಸ್ವಸಹಾಯ ಸಂಘವು ತನ್ನ ಸಾಧನೆಗಾಗಿ ರಾಷ್ಟ್ರೀಯ ಪ್ರಶಸ್ತಿ ಪಡೆದುಕೊಂಡಿದೆ. ಸ್ವಸಹಾಯ ಸಂಘದ ಮೂಲಕ ಕುಂದುವಾಡ ಕೆರೆ ರಸ್ತೆಯ ಒಳಾಂಗಣ ಕ್ರೀಡಾಂಗಣದ ಎದುರು ಆರಂಭಿಸಿದ್ದ ಚಾರ್ವಿ ಅಥೆಂಟಿಕ್ ಎಣ್ಣೆ ಗಾಣದ ಘಟಕ ಪ್ರಶಸ್ತಿಗೆ ಕಾರಣವಾಗಿದೆ.

ನಲ್ಮ್ ಹಾಗೂ ಸಿಡ್ಬಿ ಪ್ರಾಯೋಜಕತ್ವದಲ್ಲಿ ಆಯೋಜಿಸಲಾದ ಸಮಾರಂಭದಲ್ಲಿ ಅತ್ಯುತ್ತಮ ಮಹಿಳಾ ಉದ್ಯಮಿ ಪ್ರಶಸ್ತಿ ನೀಡಲಾಗಿದೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ದೆಹಲಿಯ ಮೇಯರ್ ಮಧು ಆಜಾದ್ ಅವರು ಸ್ವಸಹಾಯ ಸಂಘದ ಸ್ಥಾಪಕಿ ನಳಿನಿ ಪೂರ್ಣ ಅವರಿಗೆ ಪ್ರಶಸ್ತಿ ವಿತರಿಸಿದ್ದಾರೆ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿರುವ ನಳಿನಿ ಪೂರ್ಣ, ಕರ್ನಾಟಕದಿಂದ ತಮ್ಮ ಸಂಸ್ಥೆಯೊಂದಕ್ಕೆ



ಪ್ರಶಸ್ತಿ ದೊರೆತಿದೆ. ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ವಿಡಿಯೋ ಕಾನ್ಫರೆನ್ಸ್ ನಡೆಸಿ ಯೋಜನೆಯ ವಿವರಗಳನ್ನು ಪಡೆದುಕೊಳ್ಳಲಾಗಿತ್ತು. ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ಅಸ್ಸಾಂ ಹಾಗೂ ಕೇರಳ ರಾಜ್ಯಗಳ ಸಾಧಕಿಯರಿಗೆ ಈ ಗೌರವ ಪ್ರದಾನ ಮಾಡಲಾಗಿದೆ ಎಂದರು.

ದೀನ್ ದಯಾಳ್ ಅಂತ್ಯೋದಯ ಯೋಜನೆ - ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ - ನಲ್ಮ್) ಯೋಜನೆಯ ಮೂಲಕ 1.5 ಲಕ್ಷ ರೂ.ಗಳ ಸಾಲ ಪಡೆದು ಈ ಘಟಕ ಆರಂಭಿಸಲಾಗಿತ್ತು. ನಂತರ ಪಿಎಂ - ಎಫ್‌ಎಂಇ (ಪ್ರಧಾನ ಮಂತ್ರಿ - ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ) ಮೂಲಕ ಸಬ್ಸಿಡಿ ಸಾಲದ ನೆರವು ದೊರೆತಿತ್ತು. ನಂತರದಲ್ಲಿ ಕೃಷಿ ಉಪ ಉತ್ಪನ್ನಗಳ ಯೋಜನೆಯಡಿ ಪಡೆದ ಸಾಲದಿಂದ ಘಟಕ ವಿಸ್ತರಿಸಲು ಸಾಧ್ಯವಾಯಿತು ಎಂದು ನಳಿನಿ ಪೂರ್ಣ ತಿಳಿಸಿದ್ದಾರೆ.

ಇಂಜಿನಿಯರ್ ಪದವೀಧರೆಯಾಗಿರುವ ನಳಿನಿ ಅವರು, ಚಾರ್ವಿ ಸ್ವಸಹಾಯ ಮಹಿಳಾ ಸಂಘ ಸ್ಥಾಪಿಸಿದ್ದರು. ಈ ಸಂಘದ ಮೂಲಕ ನಗರ ಪಾಲಿಕೆಯ ನೆರವಿನೊಂದಿಗೆ ನಲ್ಮ್ ಯೋಜನೆಯ ಮೂಲಕ 1.50 ಲಕ್ಷ ರೂ.ಗಳ ಸಾಲ ದೊರೆತಿತ್ತು. ಇದರಿಂದ ಘಟಕ ಆರಂಭಿಸಲಾಗಿತ್ತು. (4ನೇ ಪುಟಕ್ಕೆ)

## ಇಟ್ಟಿಗೆ ಭಟ್ಟಿಗಳಿಗೆ ಸೌರಶಕ್ತಿ ಬಳಕೆ

ನವದೆಹಲಿ, ಆ. 19 - ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಇಟ್ಟಿಗೆ ಭಟ್ಟಿಗಳು ಸೌರ ಶಕ್ತಿಯ ಕಾರಣದಿಂದಾಗಿ ಹೊಸ ಬೆಳವಣಿಗೆ ಕಾಣುತ್ತಿವೆ. ಸೌರ ಶಕ್ತಿಯ ಬಳಕೆ ಭಟ್ಟಿಗಳಿಂದ ಮಾಲಿನ್ಯಕಾರಕ ಹೊಗೆ ಹೊರಸೂಸುವುದನ್ನು ನಿಲ್ಲಿಸುವ ಜೊತೆಗೆ, ಕಾರ್ಮಿಕರಿಗೂ ಅನುಕೂಲ ತರುತ್ತಿದೆ.


ಅಲೀಘಡ ಜಿಲ್ಲೆಯ ಎಂಟು ಇಟ್ಟಿಗೆ ಭಟ್ಟಿಗಳು ಕಲ್ಲಿದ್ದಲಿನ ಬದಲು ಸೌರ ಫಲಕಗಳನ್ನು ಅವಲಂಬಿಸುವ ಮೂಲಕ ಹೊಸ ಹೆಜ್ಜೆ ಇಟ್ಟಿವೆ. ಜಿಲ್ಲೆಯಲ್ಲಿ 555 ಇಟ್ಟಿಗೆ ಭಟ್ಟಿಗಳಿವೆ. ಹೀಗಾಗಿ ಬದಲಾವಣೆಯ ದಾರಿ ಸುದೀರ್ಘವಾಗಿದೆಯಾದರೂ, ಮೊದಲ ಹೆಜ್ಜೆ ಇಟ್ಟಂತಾಗಿದೆ.

ಸೌರ ಫಲಕಗಳ ಅಳವಡಿಕೆಗೆ 7 ಲಕ್ಷ ರೂಪಾಯಿಗಳ ವೆಚ್ಚವಾಯಿತು. ಆದರೆ ದೀರ್ಘಾವಧಿಯಲ್ಲಿ ಇದರಿಂದ ಲಾಭ ಸಿಗಲಿದೆ. 455 ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಪಡೆಯುತ್ತಿದ್ದೇವೆ. ಇದರಿಂದ ಪ್ರತಿ ತಿಂಗಳು 50,000 ರೂ.ಗಳ ಉಳಿತಾಯವಾಗುತ್ತಿದೆ ಎಂದು ಇಟ್ಟಿಗೆ ಭಟ್ಟಿ ಮಾಲೀಕ ಓಂ ಪ್ರಕಾಶ್ ಶರ್ಮ ತಿಳಿಸಿದ್ದಾರೆ.

ಇಟ್ಟಿಗೆ ಭಟ್ಟಿಗಳ ಕಾರ್ಮಿಕರ ಗುಡಿಸಲುಗಳಿಗೆ ವಿದ್ಯುತ್ ಪೂರೈಕೆ ಸೇರಿದಂತೆ ಹಲವು ಉದ್ದೇಶಗಳಿಗೆ ಸೌರ ಫಲಕಗಳು ಬಳಕೆಯಾಗುತ್ತಿವೆ. ಈ ಹಿಂದೆ ಭಟ್ಟಿಗಳ ಕಾರ್ಯನಿರ್ವಹಣೆಗಾಗಿ ಡೀಸೆಲ್ ಹಾಗೂ ಕಲ್ಲಿದ್ದಲು ಅವಲಂಬಿಸುವ ಪರಿಸ್ಥಿತಿ ಇತ್ತು.

ಇತ್ತೀಚಿನ ದಿನಗಳಲ್ಲಿ ಪರಿಸರ ಕಾಳಜಿ ಹೆಚ್ಚಾಗುತ್ತಿದೆ.

**ಪರಿಸರ ಮಾಲಿನ್ಯ ತಡೆಯುವತ್ತ ಹೆಜ್ಜೆ**



ಹೀಗಾಗಿ ರಾಜ್ಯ ಸರ್ಕಾರ ಸಹ ಇಟ್ಟಿಗೆ ಭಟ್ಟಿಗಳ ಮಾಲಿನ್ಯ ಕಡಿಮೆ ಮಾಡಲು ತಿಳಿಸಿದೆ ಎಂದು ಕೆ.ಕೆ.ಕೆ. ಬ್ರಿಕ್ಸ್ ಮಾಲೀಕ ಸುಧೀರ್ ಗುಪ್ತ ಹೇಳಿದ್ದಾರೆ.

ಸೌರ ಫಲಕಗಳ ಬಳಕೆಯಿಂದ ಮಾತ್ರ ಕಲ್ಲಿದ್ದಲು ಹಾಗೂ ಡೀಸೆಲ್ ಮೇಲಿನ ಅವಲಂಬನೆ ತಗ್ಗಿಸಲು ಸಾಧ್ಯ ಎಂದವರು ಹೇಳಿದ್ದಾರೆ.

ಇಟ್ಟಿಗೆ ಭಟ್ಟಿಗಳು ಪರಿಸರ ಮಾಲಿನ್ಯಕ್ಕೆ ಗಣನೀಯ ಕಾರಣವಾಗುತ್ತಿವೆ. ಭಟ್ಟಿಗಳಿಂದ ಹೊರಬರುವ ಹೊಗೆಯಿಂದಾಗಿ ವಾಯುಗುಣ ಮಟ್ಟ ಹಾಳಾಗುತ್ತಿದೆ. ಭಾರತದಲ್ಲಿ ಸುಮಾರು ಒಂದು ಲಕ್ಷ (4ನೇ ಪುಟಕ್ಕೆ)

## ಸನಾತನ ಹಿಂದೂ ಧರ್ಮ ಗಟ್ಟಿಗೊಳಿಸುವ ಅಗತ್ಯವಿದೆ

### ಹೊಳೆಸಿರಿಗೆರೆ : ಬನಶಂಕರಿ ದೇವಿ ದೇವಸ್ಥಾನ ಲೋಕಾರ್ಪಣೆ ಸಮಾರಂಭದಲ್ಲಿ ಪ್ರಭುಲಿಂಗ ಶ್ರೀ

ಮಲೇಬೆನ್ನೂರು, ಆ. 19- ಇತರೆ ಧರ್ಮಗಳಿಗಿಂತಲೂ ಹಿಂದೂ ಧರ್ಮಕ್ಕೆ ಅತಿ ದೊಡ್ಡ ಇತಿಹಾಸವಿದೆ. ಅನಾದಿ ಕಾಲದಿಂದಲೂ ಹಿಂದೂ ಧರ್ಮ ಬೆಳೆದು ಬಂದಿದ್ದು, ಎಲ್ಲರನ್ನೂ ಪ್ರೀತಿಸುವ, ಗೌರವಿಸುವ ಗುಣ ಹಿಂದೂ ಧರ್ಮಕ್ಕೆ ಇದೆ ಎಂದು ತುಮ್ಮಿನಕಟ್ಟೆಯ ಪದ್ಮಸಾಲಿ ಗುರುಪೀಠದ ಶ್ರೀ ಪ್ರಭುಲಿಂಗ ಸ್ವಾಮೀಜಿ ಹೇಳಿದರು.

ಹೊಳೆಸಿರಿಗೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಬನಶಂಕರಿ ದೇವಸ್ಥಾನದ ಲೋಕಾರ್ಪಣೆ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಶಾಂತಿ, ಸಾಮರಸ್ಯ ಬಯಸುವ ಹಿಂದೂ ಧರ್ಮವನ್ನು ಉಳಿಸುವ ಕೆಲಸ ಸದ್ದಿಲ್ಲದೆ ನಡೆಯುತ್ತಿದ್ದು, ಈ ಬಗ್ಗೆ ಹಿಂದೂಗಳಾದ ನಾವು ಒಗ್ಗಟ್ಟಾಗಬೇಕು. ಹಿಂದೂ ಧರ್ಮವನ್ನು ಗಟ್ಟಿಗೊಳಿಸುವ ಜೊತೆಗೆ ಸನಾತನ ಧರ್ಮವನ್ನು ಬೆಳೆಸಬೇಕೆಂದು ಸ್ವಾಮೀಜಿ ಕರೆ ನೀಡಿದರು.

ಲಿಂಗದಹಳ್ಳಿ ಮಠದ ಶ್ರೀ ವೀರಭದ್ರ ಸ್ವಾಮೀಜಿ ಮಾತನಾಡಿ, ಜಿಲ್ಲೆಯ ಜನರು ಗುರು ಭಕ್ತರು ಅಷ್ಟೇ ಅಲ್ಲ, ದೈವೀ ಭಕ್ತರೂ ಆಗಿದ್ದಾರೆ. ಹೊಳೆಸಿರಿಗೆರೆ ಗ್ರಾಮಸ್ಥರಿಂದ



ಧರ್ಮಾನುಷ್ಠಾನವಾಗಿದ್ದು, ಈ ಊರಿನ ಹಿರಿಯರು ಆದರ್ಶ ವ್ಯಕ್ತಿಗಳಾಗಿದ್ದಾರೆ ಎಂದರು.

ಬನಶಂಕರಿ ದೇವಸ್ಥಾನಕ್ಕೆ ಕಳಸ ಪ್ರತಿಷ್ಠಾಪನೆ ನೆರವೇರಿಸಿದ ಕೋಡಿಯಾಲ-ಹೊಸಪೇಟೆಯ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ ಮಾತನಾಡಿ, ಹೊಳೆಸಿರಿಗೆರೆಯಲ್ಲಿ ಹೃದಯವಂತ ಶ್ರೀಮಂತ ಭಕ್ತರಿದ್ದಾರೆ ಎಂದು ಶ್ಲಾಘಿಸಿದರು.

ಬನಶಂಕರಿ ದೇವಿ ದೇವಸ್ಥಾನ ಉದ್ಘಾಟನೆ ಹಾಗೂ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದ ರಟ್ಟಿಹಳ್ಳಿ ಕಬ್ಬಿಣಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಪರಧರ್ಮ ಸಹಿಷ್ಣುತೆಗೆ ಮಿತಿ ಇರಲಿ. ನಮ್ಮ ತನಕ್ಕೆ ಧಕ್ಕೆ ಬಂದಾಗ ನಾವು ಒಂದಾಗಲೇಬೇಕು ಎಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಯಲವಟ್ಟಿಯ ಶ್ರೀ ಗುರು ಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಮಾತನಾಡಿ, ತಂದೆ-ತಾಯಿಗಳ ಜೊತೆಗೆ ಗುರುಗಳ, ದೇವರ ಆಶೀರ್ವಾದ ಇದ್ದರೆ ಎಂತಹ ಸಮಸ್ಯೆಯನ್ನು ಬೇಕಾದರೂ ಎದುರಿಸಬಹುದೆಂಬುದನ್ನು ಉದಾಹರಣೆ ಸಮೇತ ಹೇಳಿದರು.

ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಮಾತನಾಡಿ, ರಾಜಕೀಯದಲ್ಲಿ ಹೆಚ್ಚಾಗುತ್ತಿರುವ ಅರಾಜಕತೆಗೆ ಕಡಿವಾಣ ಹಾಕಲು ಮಠಾಧೀಶರು ಮುಂದಾಗಬೇಕೆಂದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಜನರಿಗೆ ಧರ್ಮದ ಹಾದಿಯಲ್ಲಿ ಸನ್ಮಾರ್ಗ ತೋರಿಸುವ ಕೆಲಸವನ್ನು ಧರ್ಮ ಗುರುಗಳು ಮಾಡಬೇಕೆಂದು ಮನವಿ ಮಾಡಿದರು.

ಗ್ರಾಮದ ಹಿರಿಯ ಮುತ್ಸದ್ದಿ ಎನ್.ಜಿ. ನಾಗನಗೌಡ್ರು ಮಾತನಾಡಿ, ದೇವಸ್ಥಾನ ನಿರ್ಮಾಣಕ್ಕೆ ಸಹಕಾರ ನೀಡಿದ ದಾನಿಗಳನ್ನು ಮತ್ತು ದೇವಸ್ಥಾನದ (4ನೇ ಪುಟಕ್ಕೆ)

## ಐರಣಿ ಮಠದ ಸ್ವಾಮೀಜಿ ಶಿಷ್ಯರೆಂದು ಹೇಳಿ ವಂಚನೆ

### ಐವರ ಬಂಧನ: 2.80 ಲಕ್ಷ ರೂ.ವಶ

ದಾವಣಗೆರೆ, ಆ. 19- ಐರಣಿ ಮಠದ ಸ್ವಾಮೀಜಿಯ ಶಿಷ್ಯರೆಂದು ಹೇಳಿ ವಂಚಿಸಿದ ಇಬ್ಬರನ್ನು ಬಂಧಿಸಿರುವ ಪೊಲೀಸರು ಅವರಿಂದ 2.80 ಲಕ್ಷ ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ 15 ಲಕ್ಷ ರೂ. ಮೌಲ್ಯದ 3 ಕಾರುಗಳನ್ನು ವಶಕ್ಕೆ ಪಡೆದಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಇಲಿಯಾಜ್, ದಾವಣಗೆರೆ ಜಿಲ್ಲೆಯ ಕಿರಣ್, ದಾದಾಪೀರ್, ಮಂಜುನಾಥ್ ಹಾಗೂ ಚಿತ್ರದುರ್ಗದ ಮಹಾಂತೇಶ್ ಬಂಧಿತರು. ಇವರು 2023ರ ಅಕ್ಟೋಬರ್ 21ರಂದು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಕೆಂಚನಾಳ್ ಗ್ರಾಮದ ಚಮನ್ ಸಾಬ್ ಅವರಿಗೆ ತಾವು ಐರಣಿ ಮಠದ ಸ್ವಾಮೀಜಿ ಶಿಷ್ಯರೆಂದು ಪರಿಚಯಿಸಿಕೊಂಡಿದ್ದರು.

ನಮ್ಮ ಬಳಿ 100 ರೂ. ಮುಖ ಬೆಲೆಯ ನೋಟುಗಳಿದ್ದು ನೀವು 500 ರೂ. ಮುಖ ಬೆಲೆಯ ನೋಟು ನೀಡಿದರೆ ಹೆಚ್ಚಿನ ಹಣ ನೀಡುತ್ತೇವೆಂದು ನಂಬಿಸಿ ಬಾಕ್ಸ್ ನೀಡಿ ಮೋಸ ಮಾಡಿದ್ದರು. ಈ ಕುರಿತು ಹರಿಹರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಹರಿಹರ ಪೊಲೀಸ್ ವೃತ್ತ ನಿರೀಕ್ಷಕ ಸುರೇಶ ಸಗರಿ ನೇತೃತ್ವದಲ್ಲಿ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯ ಮಂಜುನಾಥ ಎಸ್. ಕುಪ್ಪೇಲೂರು ಪಿ.ಎಸ್.ಐ (ಕಾ&ಸು), ಚಿದಾನಂದಪ್ಪ ಪಿ.ಎಸ್.ಐ (ತನಿಖೆ) ಸಿಬ್ಬಂದಿಗಳಾದ ತಿಪ್ಪೇಸ್ವಾಮಿ, ನಾಗರಾಜ. ಕರಿಯಪ್ಪ, ರಮೇಶ, ದಾದಾಪೀರ್, ನೀಲಮೂರ್ತಿ, ಸತೀಶ, ಎಲ್.ಡಿ (4ನೇ ಪುಟಕ್ಕೆ)

# ರಾಜ್ಯಪಾಲರ ನಡೆ ಖಂಡಿಸಿ ಹರಿಹರದಲ್ಲಿ ಕಾಂಗ್ರೆಸ್ ಬೃಹತ್ ಪ್ರತಿಭಟನೆ



ಹರಿಹರ, ಅ.19- ಮುಡಾ ನಿವೇಶನ ಕುರಿತಂತೆ, ರಾಜ್ಯಪಾಲರು ಸಿ.ಎಂ. ಸಿದ್ದರಾಮಯ್ಯ ನವರ ವಿರುದ್ಧ ಪ್ರಾಸಿಕ್ಯೂಷನ್ಗೆ ಅನುಮತಿ ನೀಡಿರುವುದನ್ನು ಖಂಡಿಸಿ ತಾಲ್ಲೂಕು ಕಾಂಗ್ರೆಸ್ ಪಕ್ಷದ ವತಿಯಿಂದ ಇಂದು ನಗರದಲ್ಲಿ ಬೃಹತ್ ಪ್ರತಿಭಟನೆ ಮಾಡಿ, ತಹಶೀಲ್ದಾರ್ ಗುರುಬಸವರಾಜ್ ಅವರಿಗೆ ಮನವಿ ಅರ್ಪಿಸಲಾಯಿತು.

ಪಕ್ಕೀರಸ್ವಾಮಿ ಮಠದ ಮುಂಭಾಗದಿಂದ ಆರಂಭವಾದ ಮೆರವಣಿಗೆಯು ಶಿವಮೊಗ್ಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆಯ ಮೂಲಕ ಹಾದು, ಗಾಂಧಿ ವೃತ್ತದಲ್ಲಿ ಟೈರಿಗೆ ಬೆಂಕಿ ಹಚ್ಚುವ ಮೂಲಕ ಆಕ್ರೋಶ ವ್ಯಕ್ತಪಡಿಸಿ, ಬಿಜೆಪಿ -ಜೆಡಿಎಸ್ ಪಕ್ಷದ ವಿರುದ್ಧ ಘೋಷಣೆ ಹಾಕಲಾಯಿತು.

ಈ ವೇಳೆ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಬಳಿ ಹರಿಹರ ತಾಲ್ಲೂಕಿನ ಭೈರನಪಾದ ಏತ ನೀರಾವರಿ ಯೋಜನೆ ಮತ್ತು ನಗರದ ಕುಡಿಯುವ ನೀರಿನ ಶೇಖರಣಾ ಘಟಕದ ಯೋಜನೆ ವಿಚಾರಗಳಿಗೆ ಸಂಬಂಧಿಸಿದಂತೆ ದಾಖಲೆಗಳು ಇದ್ದು, ಅವುಗಳು ಕಾರ್ಯರೂಪಕ್ಕೆ ಬರಬೇಕಾದರೆ ಅವರನ್ನು ಆಡಳಿತದಲ್ಲಿ ಹೋರಾಟದ ಮೂಲಕ ಉಳಿಸಿಕೊಳ್ಳುವುದು ತಾಲ್ಲೂಕಿನ ಜನತೆಗೆ ಅತ್ಯವಶ್ಯಕವಾಗಿದೆ ಎಂದರು.

ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ಮುಡಾ ವಿಚಾರದಲ್ಲಿ ಯಾವುದೇ ರೀತಿಯ ತಿರುಳಿಲ್ಲ ಎಂಬುದು ರಾಜ್ಯಪಾಲರಿಗೆ ತಿಳಿದಿದೆ. ಆದರೂ ಸಹ ಪ್ರಾಸಿಕ್ಯೂಷನ್ಗೆ ಅನುಮತಿ ನೀಡಿರುವುದು ರಾಜ್ಯದ ಸಮಸ್ತ ಜನರಿಗೆ ಮಾಡಿರುವ ದ್ರೋಹವಾಗಿದೆ ಎಂದು ಕಿಡಿಕಾರಿದರು.

ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಮಾತನಾಡಿ, ರಾಜ್ಯಪಾಲರು ತಮ್ಮ ಹುದ್ದೆಯ ಘನತೆ ಮತ್ತು ಸಂವಿಧಾನದ ಆಶಯಗಳನ್ನು ಕೊಂದು ಹಾಕಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿ.ಪಂ. ಮಾಜಿ ಸದಸ್ಯರಾದ ಎಂ. ನಾಗೇಂದ್ರಪ್ಪ, ಬಿ.ಎಂ. ವಾಗೀಶ್ ಸ್ವಾಮಿ, ಮಾಜಿ ಎಪಿಎಂಸಿ ಅಧ್ಯಕ್ಷ ಮಂಜುನಾಥ್ ಪಾಟೀಲ್, ಮಾಜಿ ನಗರಸಭೆ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಮುಖಂಡ ಸಿ.ಎನ್. ಹುಲಿಗೇಶ್, ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ, ರಾಜ್ಯಪಾಲರ ಕಚೇರಿ ಇತ್ತೀಚೆಗೆ ಬಿಜೆಪಿ - ಜೆಡಿಎಸ್ ಮತ್ತು ಆರ್.ಎಸ್.ಎಸ್. ಕಚೇರಿಯಾಗಿ ಮಾರ್ಪಾಡಾಗಿದೆ. ಬಿಜೆಪಿಯವರಿಗೆ ಆಪರೇಷನ್ ಕಮಲ ಎಂಬ ಚಟುವಟಿಕೆಗೆ ರಾಜ್ಯದಲ್ಲಿ ಅವಕಾಶ ಇಲ್ಲವೆಂದು ಮನವರಿಕೆ ಯಾಯಿತೋ ಆಗಿನಿಂದಲೇ ರಾಜ ಭವನವನ್ನು ದುರುಪಯೋಗ ಪಡಿಸಿಕೊಂಡು, ಚುನಾಯಿತ ಸರ್ಕಾರವನ್ನು ಬುಡ ಮೇಲು ಮಾಡಿ, ಅಧಿಕಾರಕ್ಕೆ ಬರಬೇಕು ಎಂದು ಕನಸು ಕಾಣುತ್ತಿರುವುದರಿಂದ ನೋಟಿಸ್, ಪ್ರಾಸಿಕ್ಯೂಷನ್ ಅನುಮತಿ ಎಂಬ ನಾಟಕ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಟಿ.ಜೆ. ಮುರುಗೇಶಪ್ಪ, ಅಮರಾವತಿ ರೇವಣಸಿದ್ದಪ್ಪ, ಕೆ.ಜಡಿಯಪ್ಪ, ಕನ್ನಪ್ಪ ಭಾನುವಳ್ಳಿ, ಮಹಮ್ಮದ್ ಫೈರೋಜ್, ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್, ಅಲೀಂ, ಬಾಬುಲಾಲ್, ನಾಮನಿರ್ದೇಶನ ಸದಸ್ಯರಾದ ಕೆ.ಬಿ. ರಾಜಶೇಖರ, ಸಂತೋಷ ದೊಡ್ಡಮನಿ, ಜೋಸೆಫ್, ದಿವಾಕರ್, ಮುಖಂಡರಾದ ಎಂ.ಬಿ. ಅಣ್ಣಪ್ಪ, ಸಂತೋಷ ನೋಟದರ್, ಆದಾಪುರ ವೀರಭದ್ರಪ್ಪ, ಪರಶುರಾಮ್ ಅಂಬೇಕರ್, ಗಣೇಶ ದುರ್ಗದ್, ಮಲ್ಲೇಶ್, ಎಂ.ಬಿ. ಅಭಿದಾಲಿ, ಎಲ್.ಬಿ ಹನುಮಂತಪ್ಪ, ದಾದಾಪೀರ್ ಭಾನುವಳ್ಳಿ, ಬಿ.ಎನ್. ರಮೇಶ್, ಜಿಗಳಿ ಆನಂದಪ್ಪ, ಹೆಚ್.ಶಿವಪ್ಪ, ಕೆ.ಅಣ್ಣಪ್ಪ, ಎಂ.ಎಸ್. ಆನಂದ್, ಕುಂಬಳೂರು ವಾಸುದೇವ್, ತಿಪ್ಪೇಶ್, ಬಾಷಾ, ಭಾಗ್ಯಮ್ಮ, ಐರಣಿಯಮ್ಮ, ಜಮಿಲಾಬಿ, ಮಾಲಾ, ಸವಿತಾ ನಾಯ್ಕ್, ಹಬೀಬ್ ಉಲ್ಲಾ, ಮಲ್ಲೇಶ್ ಕಮಲಾಪುರ, ಬಲರಾಮ್, ರಮೇಶ್ ನಾಯ್ಕ್, ಶ್ರೀನಿವಾಸ್ ಮೂರ್ತಿ, ನಿಧಿ, ನಾರಾಯಣ, ಬಬ್ಲೂ ಪೈಲ್ವಾನ್, ನಸ್ರುಲ್ಲಾ, ಕುಮಾರ್, ಬೆಳ್ಳೂಡಿ ಕುಮಾರ್ ಇತರರು ಹಾಜರಿದ್ದರು.

# ರಾಜ್ಯಪಾಲರ ವಿರುದ್ಧ ಜಿಲ್ಲಾ ಕಾಂಗ್ರೆಸ್ ಪ್ರತಿಭಟನೆ



## ಸಿದ್ಧರಾಮಯ್ಯ ಯಾವಾಗಲೂ ಸಿದ್ಧ ಹಸ್ತರು

**(1ನೇ ಪುಟದಿಂದ) ಒಳ್ಳೆಯದಾಗಬೇಕು ಎಂದರೆ ಸಿದ್ಧರಾಮಯ್ಯನವರಿಂದ ಮಾತ್ರ. ರಾಜ್ಯಪಾಲರು ಸ್ವನಿರ್ಧಾರ ಕೈಗೊಳ್ಳದೇ ಕೇಂದ್ರ ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಬಿಜೆಪಿ ನಾಯಕರು ಮಾಡಿದ ದೊಡ್ಡ ಹಗರಣಗಳನ್ನು ಬಿಟ್ಟು 'ಮುಡಾ' ಪ್ರಕರಣ ಹಿಡಿದುಕೊಂಡು ವಿವಾದ ಸೃಷ್ಟಿಸಿದ್ದಾರೆ' ಎಂದು ಎಸ್ಸೆಸ್ ಕಿಡಿಕಾರಿದರು. ಅಧಿಕಾರದಲ್ಲಿದ್ದ ಅವಧಿಯಲ್ಲಿ ಬಿಜೆಪಿ ನಾಯಕರು ರಾಜ್ಯವನ್ನು ಕೊಳ್ಳೆಹೊಡೆದು ಹಣ, ಆಸ್ತಿ ಮಾಡಿಕೊಂಡಿದ್ದಾರೆ. ಗಂಟಲವರೆಗೂ ತಿಂದು ಜೀರ್ಣಿಸಿಕೊಳ್ಳಲು ಒದ್ದಾಡುತ್ತಿದ್ದಾರೆ. ರಾಜ್ಯ ಸರ್ಕಾರವನ್ನು ಕೆಡವಲು ಇಂಥವರಿಂದ ಸಾಧ್ಯವಿಲ್ಲ. ಬಿಜೆಪಿ ನಾಯಕರ ಹಗರಣಗಳು ಒಂದೊಂದಾಗಿ ಬೆಳಕಿಗೆ ಬರಲಿವೆ ಎಂದರು.**

**(1ನೇ ಪುಟದಿಂದ)** ಡಾ.ಪ್ರಭಾ ಮಲ್ಲಿಕಾರ್ಜುನ್, ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರ ಕ್ರಮ ಸೇಡಿನಿಂದ ಕೂಡಿದೆ ಎಂದು ಆರೋಪಿಸಿದರು.

ಮುಖ್ಯಮಂತ್ರಿಗಳು ರಾಜ್ಯದಲ್ಲಿ ಉತ್ತಮ ಆಡಳಿತ ನಡೆಸುತ್ತಿದ್ದಾರೆ. ಅವರನ್ನು ಅಧಿಕಾರದಿಂದ ಕೆಳಗೆ ಇಳಿಸುವ ಬಿಜೆಪಿ ಷಡ್ಯಂತ್ರ ನಿರೂಪಿತವಾಗಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಂತೆ ಸಿದ್ದರಾಮಯ್ಯ ಕೂಡ ರಾಜೀನಾಮೆ ನೀಡುವ ಅಗತ್ಯ ಇಲ್ಲ ಎಂದು ಡಾ.ಪ್ರಭಾ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆದೇಶದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರತಿಭಟನೆ ನಡೆಸುತ್ತಿದ್ದೇವೆ. ಜಿಲ್ಲೆಯ ಎಂಟೂ ತಾಲ್ಲೂಕುಗಳಿಂದ ಮುಖಂಡರು ಆಗಮಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡು, ಒಗ್ಗಟ್ಟಿನಿಂದ ಸಿದ್ಧರಾಮಯ್ಯನವರ ಪರವಾದ ನಿಲುವನ್ನು ತೋರಿಸುತ್ತಿದ್ದೇವೆ.

ಇದು ಜನಪ್ರತಿನಿಧಿಗಳ ಹೋರಾಟವಾಗಿದ್ದು, ಕೇಂದ್ರ ಸಿದ್ಧರಾಮಯ್ಯ ವಿರುದ್ದ ನಿಲುವು ತಾಳಿದರೆ ನಾವೆಲ್ಲಾ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

136 ಶಾಸಕರು, ಸಂಸದರು ಹಾಗೂ ಜನಪ್ರತಿನಿಧಿಗಳ ಬೆಂಬಲ ಸಿದ್ಧರಾಮಯ್ಯ ಅವರಿಗಿದೆ. ಗ್ಯಾರಂಟಿ ಯೋಜನೆ ಸೌಲಭ್ಯ ಪಡೆದ ಲಕ್ಷಾಂತರ ಜನರ ಹಾರೈಕೆ ಮುಖ್ಯಮಂತ್ರಿಗಳಿಗಿದೆ. ನಮಗೆ ಸಂವಿಧಾನ ಹಾಗೂ ಕಾನೂನಿನಲ್ಲಿ ಭರವಸೆ ಇದೆ ಎಂದು ಹೇಳಿದರು.

ಶಾಸಕ ಕೆ.ಎಸ್. ಬಸವಂತಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಶಿವಕುಮಾರ್, ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವ ನಾಯ್ಕ, ಮುಖಂಡರುಗಳಾದ ಎ.ನಾಗರಾಜ್, ಜಿ.ಸಿ. ನಿಂಗಪ್ಪ ಹದಡಿ, ವಕೀಲ ಎಸ್. ಪರಮೇಶ್, ಜಿ.ಬಿ. ಲಿಂಗರಾಜ್, ಬಿ.ಕೆ.ಪರಶುರಾಮ್ ಮಾಗಾನಹಳ್ಳಿ ಮತ್ತಿತರರು ಭಾಗವಹಿಸಿದ್ದರು.

## ನಂದಿಗುಡಿ ಶ್ರೀಗಳ ಸಾನ್ನಿಧ್ಯದಲ್ಲಿ ನಾಳೆ ಭದ್ರೆಗೆ ಬಾಗಿನ



ಮಲೇಬೆನ್ನೂರು, ಆ.19 - ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಇದೇ ದಿನಾಂಕ 21ರ ಬುಧವಾರ ಬೆಳಗ್ಗೆ 11ಕ್ಕೆ ದಾವಣಗೆರೆ, ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಯ ಭಕ್ತರು ಸೇರಿ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಲಿದ್ದಾರೆ.

# ಮುಖ್ಯಮಂತ್ರಿಗೆ ತಾತ್ಕಾಲಿಕ ರಿಲೀಫ್

**(1ನೇ ಪುಟದಿಂದ)** ವಿರುದ್ಧ ತನಿಖೆಗೆ ಆದೇಶ ನೀಡಿದ್ದಾರೆ ಎಂದು ತಿಳಿಸಿಲ್ಲ. ಸ್ವತಃ ಸಿದ್ದರಾಮಯ್ಯ ಹಾಗೂ ಸಂಪುಟ ಸಭೆ, ರಾಜ್ಯಪಾಲರ ಶೋಕಾಸ್ ನೋಟಿಸ್‌ಗೆ ನೀಡಿದ್ದ ಉತ್ತರವನ್ನೂ ಪರಿಗಣಿಸಿಲ್ಲ ಎಂದು ಹೇಳಿದರು.

ರಾಜ್ಯಪಾಲರಿಗೆ ಸಿದ್ದರಾಮಯ್ಯ ಅವರ ರಾಜೀನಾಮೆ ಅಷ್ಟೇ ಬೇಕಿದೆ, ಅದಕ್ಕೆ ಒಂದೇ ಒಂದು ಸರಿಯಾದ ಕಾರಣ ನೀಡದೇ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಲಾಗಿದೆ. ಇಂತಹ ಕ್ರಮ ಸರ್ಕಾರ ಅಸ್ಥಿರಗೊಳಿಸುವುದಾಗಿದೆ, ಇಂತಹ ದೂರುಗಳನ್ನು ಮುಂದಿಟ್ಟುಕೊಂಡು ರಾಜೀನಾಮೆ ಪಡೆದು ರಾಷ್ಟ್ರಪತಿ ಆಡಳಿತ ಹೇರುವ ಸ್ಥಿತಿ ಇಲ್ಲ ಎಂದರು.

ಸರ್ಕಾರಿ ಸೇವಕನಾಗಿ ಮುಖ್ಯಮಂತ್ರಿ ಯಾವುದೇ ಶಿಫಾರಸ್ಸು ಮಾಡಿಲ್ಲ, ಮುಡಾ ಕಡತಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ, ರಾಜ್ಯಪಾಲರು ನೂತನ ಬಿಎನ್‌ಎಸ್‌ಎಸ್ ಕಾಯಿದೆಯನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಸ್ವತಂತ್ರವಾಗಿ ಪ್ರಾಸಿಕ್ಯೂಷನ್ ಅನುಮತಿಗೆ ನಿರ್ಧರಿಸಿದ್ದೇನೆ ಎಂದಷ್ಟೇ ರಾಜ್ಯಪಾಲರು ಹೇಳಿದ್ದಾರೆ. ಅವರು ಸೆಕ್ಷನ್ 17ಎ ಅಡಿಯಲ್ಲಿ ತನಿಖೆಗೆ ಅನುಮತಿ ನೀಡುವಾಗ ಇರುವ ನಿಯಮಗಳನ್ನೂ ಪಾಲಿಸಿಲ್ಲ ಎಂದರು.

ಕರ್ನಾಟಕ ಸರ್ಕಾರದ ಸಂಪುಟ ನೀಡಿರುವ 100 ಪುಟಗಳ ಉತ್ತರಕ್ಕೆ ರಾಜ್ಯಪಾಲರು ಎರಡು ಪುಟಗಳ ಉತ್ತರ ನೀಡಿ ಮಂತ್ರಿಮಂಡಲದ ಸಭೆಯನ್ನೇ ಪರಿಗಣಿಸಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತನಿಖಾಧಿಕಾರಿ ವರದಿ ನೀಡಿಲ್ಲ, ಅಷ್ಟೇ ಅಲ್ಲ, ಯಾವ ಆರೋಪವಿದೆ ಎಂದೂ ಹೇಳಿಲ್ಲ ಎಂದು ಬೇರೆ ಬೇರೆ ನ್ಯಾಯಾಲಯಗಳಲ್ಲಿ ಬಂದ ಪ್ರಕರಣಗಳ ತೀರ್ಪುಗಳನ್ನು ಉಲ್ಲೇಖಿಸಿದರು.

ಸಂವಿಧಾನದ ವಿಧಿ 163ರಡಿ ಉತ್ತರ ಕೊಡುವ ಅಧಿಕಾರ ರಾಜ್ಯಪಾಲರಿಗೆ ಇದೆ, ಆದರೆ, ಸಂಪುಟದ ನಿರ್ಧಾರವನ್ನು ಒಂದು ಸಾಲಿನಲ್ಲಿ ತಿರಸ್ಕರಿಸಲು ಸಾಧ್ಯವಿಲ್ಲ. ಮುಖ್ಯಮಂತ್ರಿ ವಿರುದ್ಧ ದೂರು ನೀಡಿರುವ ಟಿ.ಜೆ.ಅಬ್ರಹಾಂ ಬಗ್ಗೆಯೇ ಬಹಳಷ್ಟಿದೆ, ಆತನಿಗೆ ಸುಪ್ರೀಂಕೋರ್ಟ್ ದಂಡ ವಿಧಿಸಿದೆ, ಆತ ದೂರು ನೀಡಿದ ಒಂದೇ ದಿನದಲ್ಲಿ ನೋಟಿಸ್ ಜಾರಿ ಮಾಡಿದ್ದಾರೆ.

ಈ ಪ್ರಕರಣದಲ್ಲಿ 2004 ರಿಂದ 2010ರ ತನಕ ಸಿದ್ದರಾಮಯ್ಯ ಅವರ ಪಾತ್ರವೇ ಇಲ್ಲ, 1992ರಲ್ಲಿ ಮುಡಾ ಸ್ವಾಧೀನಪಡಿಸಿಕೊಂಡ ಭೂಮಿಗೆ 1998ರಲ್ಲಿ ಡಿ-ನೋಟಿಫಿಕೇಷನ್ ಮಾಡಿದೆ, ಈ ಭೂಮಿಯನ್ನು 2004ರಲ್ಲಿ ಮುಖ್ಯಮಂತ್ರಿ ಅವರ ಬಾವಮೈದುನ ಖರೀದಿ ಮಾಡಿದ್ದಾರೆ. 2005ರಲ್ಲಿ ಕೃಷಿ ಜಮೀನಾಗಿ ಪರಿವರ್ತಿಸಲಾಗಿದೆ, 2010ರಲ್ಲಿ ಅದನ್ನು ಮುಖ್ಯಮಂತ್ರಿ ಅವರ ಪತ್ನಿಗೆ ದಾನದ ರೂಪದಲ್ಲಿ ನೀಡಲಾಗಿದೆ. ಈ ಪ್ರಕ್ರಿಯೆಗಳ ಬಹುತೇಕ ಸಮಯದಲ್ಲಿ ಸಿದ್ದರಾಮಯ್ಯ ಅಧಿಕಾರದಲ್ಲಿ ಇರಲಿಲ್ಲ ಮತ್ತು ತರಾತುರಿಯನ್ನೂ ಮಾಡಿಲ್ಲ.

ಸಕ್ಷಮ ಪ್ರಾಧಿಕಾರ 2020ರಲ್ಲಿ ಭೂಮಿಗೆ ಪರಿಹಾರವಾಗಿ ನಿವೇಶನಗಳನ್ನು ಹಂಚಿದೆ, 2022ರಲ್ಲಿ ನಿವೇಶನಗಳನ್ನು ನೀಡಿದೆ ಎಂದು ದಾಖಲೆಗಳ ಸಮೇತ ಪೀಠದ ಮುಂದೆ ವಾದ ಮಂಡಿಸಿದರು.

ಬಿಜೆಪಿ ಆಡಳಿತದ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ, ಕೆಲವು ಸಚಿವರ ವಿರುದ್ಧ ರಾಜಭವನಕ್ಕೆ ದೂರುಗಳು ಹೋಗಿದ್ದರೂ, ಅದರ ಬಗ್ಗೆ ರಾಜಭವನ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೇಳಿದರು.

ಖಾಸಗಿ ವ್ಯಕ್ತಿಯೊಬ್ಬರು ನೀಡಿದ ದೂರಿನ ಆಧಾರದಲ್ಲಿ ನೋಟಿಸ್ ನೀಡಲಾಗಿದೆ. ಸರ್ಕಾರ ನೀಡಿರುವ ಸ್ಪಷ್ಟನೆಗಳನ್ನು ತಿರಸ್ಕರಿಸಿ, ಬಿಎನ್‌ಎಸ್‌ಎಸ್ ಕಾಯಿದೆ ಅಡಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಾಗಿದೆ. 17ಎ ಅಡಿ ಯಾವುದೇ ಪೊಲೀಸ್ ಅಧಿಕಾರಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿಲ್ಲ, ಮುಖ್ಯಮಂತ್ರಿ ಅವರು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ನಿವೇಶನ ಹಂಚಿಕೆ ಮಾಡಿಲ್ಲ ಹಾಗೂ ಯಾವುದೇ ತೀರ್ಮಾನ ಕೈಗೊಂಡಿಲ್ಲ ಎಂದರು.

ವಿವೇಚನಾರಹಿತವಾಗಿ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ, ಆ ಮೂಲಕ ಸಂವಿಧಾನದ 163ನೇ ವಿಧಿಯನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಹಳಿದರು.

ಸಿಂಘ್ವಿ ನಂತರ ಪ್ರತಿವಾದಿಗಳ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ ವಾದ ಮಂಡಿಸಿ, ರಾಜ್ಯ ಸಚಿವ ಸಂಪುಟ ತೆಗೆದುಕೊಂಡಿರುವ ನಿರ್ಣಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಕ್ಷಿಸುವ ಉದ್ದೇಶ ಇರಬಹುದು. ಹೀಗಾಗಿ ಈ ವಿಚಾರದಲ್ಲಿ ಮುಖ್ಯಮಂತ್ರಿ ವಿರುದ್ಧ ತನಿಖೆಗೆ ವಹಿಸುವ ಅಧಿಕಾರ ರಾಜ್ಯಪಾಲರಿಗೆ ಇದೆ ಎಂದು ದಾಖಲೆಗಳು ಮತ್ತು ರಾಷ್ಟ್ರದ ವಿವಿಧ ನ್ಯಾಯಾಲಯಗಳ ತೀರ್ಪುಗಳನ್ನು ಪೀಠದ ಗಮನಕ್ಕೆ ತಂದರು.

ಈ ಹಿಂದೆ ಸುಪ್ರೀಂಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠ ಇಂತಹ ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ನೀಡಿದೆ. ಅದನ್ನು ಗಮನದಲ್ಲಿ ಇಟ್ಟುಕೊಂಡು ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ತೀರ್ಮಾನಿಸಿದ್ದಾರೆ. ಹೀಗಾಗಿ ಯಾವುದೇ ಮಧ್ಯಂತರ ತಡೆಯಾಜ್ಞೆ ನೀಡಬಾರದು, ಪ್ರಕರಣದ ಮುಂದಿನ ವಾದಕ್ಕೆ ಗುರುವಾರಕ್ಕೆ ಅವಕಾಶ ನೀಡಿ ಎಂದು ಮನವಿ ಮಾಡಿದರು. ಈ ಹಂತದಲ್ಲಿ ಮಧ್ಯಪ್ರವೇಶಿಸಿದ ನ್ಯಾಯಮೂರ್ತಿಗಳು, ಎಲ್ಲಾ ಪ್ರತಿವಾದಿಗಳಿಗೂ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿದರು.

## ಕಬಡ್ಡಿ ಆಟಗಾರ ಚಂದ್ರನಾಯಕ್ ಬೆಂಗಳೂರು ಬುಲ್ಸ್ ತಂಡಕ್ಕೆ ಆಯ್ಕೆ



ದಾವಣಗೆರೆ, ಆ. 19 - ಜಿಲ್ಲೆಯ ಕಬಡ್ಡಿ ಆಟಗಾರ ಚಂದ್ರನಾಯಕ್ ಅವರು ಬೆಂಗಳೂರು ಬುಲ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಅವರನ್ನು ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯಿಂದ ಸನ್ಮಾನಿಸಿ, ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಎಂ. ನಾಗರಾಜ್. ಎಂ. ನಾರಾಯಣ ಸ್ವಾಮಿ ಕಬಡ್ಡಿ ಕ್ರೀಡಾ ಪಟುಗಳು, ಸ್ಥಳೀಯ ನಾಗರಿಕರು ಭಾಗವಹಿಸಿದ್ದರು.

## ಸೊಫ್ರೋಸೈನ್ ಶಾಲೆಯಲ್ಲಿ ರಕ್ಷಾಬಂಧನ



ದಾವಣಗೆರೆ, ಆ. 19- ತಾಲ್ಲೂಕಿನ ತರಳಬಾಳು ನಗರದಲ್ಲಿರುವ ಸೊಫ್ರೋಸೈನ್ ಕಾನ್ಸೆಪ್ಟ್ (ಐಸಿಎಸ್‌ಇ) ಶಾಲೆಯಲ್ಲಿ 8, 9 ಮತ್ತು 10 ನೇ ತರಗತಿ ಮಕ್ಕಳು ರಕ್ಷಾ ಬಂಧನ ಕಾರ್ಯಕ್ರಮವನ್ನು ಆಚರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಕಾರ್ಯದರ್ಶಿ ಡಾ|| ಜಗದೀಶ್ ಎಲ್. ವಹಿಸಿದ್ದರು. ಶಾಲೆಯ ಪ್ರಾಂಶುಪಾಲರಾದ ಸೈಮನ್ ಫ್ರಾನ್ಸಿಸ್, ಕೋರ್ಡಿನೇಟರ್ ಸುನೀತ ಸೈಮನ್ ಹಾಗೂ ಇತರರು ಭಾಗವಹಿಸಿದ್ದರು.

## ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ

ದಾವಣಗೆರೆ, ಆ. 19 - ವಿಕಲಚೇತನ ವಿದ್ಯಾರ್ಥಿಗಳು ಸ್ಕಾಲರ್ ಶಿಪ್ ಪಡೆಯಲು ಪೋಸ್ಟ್-ಮೆಟ್ರಿಕ್ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿಕಲಚೇತನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ವಿಕಲಚೇತನ ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾರ್ಥಿ ವೇತನ ಪಡೆಯುವುದಕ್ಕಾಗಿ ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ವೆಬ್‌ಸೈಟ್ ವಿಳಾಸ: https://ssp.postmatric.karnataka.gov.in/ ನಲ್ಲಿ ನೋಂದಣಿ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ವಿವಿಧೋದ್ದೇಶ ಪುನರ್ವಸತಿ ಕಾರ್ಯ ಕರ್ತರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ|| ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ನೂಲು ಹುಣ್ಣಿಮೆ : ಶಾರದಾಂಬ ದೇವಸ್ಥಾನದಲ್ಲಿ ವಿಶೇಷ ಪೂಜೆ



ದಾವಣಗೆರೆ, ಆ. 19- ನಗರದ ಶ್ರೀ ಶಂಕರ ಸೇವಾ ಸಂಘದಿಂದ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ನೂಲು ಹುಣ್ಣಿಮೆ ಪ್ರಯುಕ್ತ ಉಪಾಕರ್ಮದಲ್ಲಿ ವೇದಬ್ರಹ್ಮ ಶ್ರೀ ಶಂಕರನಾರಾಯಣ ಶಾಸ್ತ್ರಿಗಳ ನೇತೃತ್ವದಲ್ಲಿ ಮತ್ತು ಅವರ ಶಿಷ್ಯವೃಂದ ಜೆ. ಎಂ. ಪುಟ್ಟಸ್ವಾಮಿ, ವಸಂತ ಕುಲಕರ್ಣಿ, ರಾಮಕೃಷ್ಣರಾವ್ ಮತ್ತು ಋಗ್ವೇದ ಮತ್ತು ಯಜುರ್ವೇದ ಉಪಕರ್ಮವನ್ನು ಹರಿಹರದ ರಾಜಶೇಖರ ಮುದ್ರಿ ಮತ್ತು ಇತರರು ನಡೆಸಿಕೊಟ್ಟರು.

50ಕ್ಕೂ ಹೆಚ್ಚು ವಟುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀ ಶಂಕರ ಸೇವಾ ಸಂಘದ ಅಧ್ಯಕ್ಷ ಡಾ. ಬಿ.ಟಿ ಅಚ್ಯುತ್, ಉಪಾಧ್ಯಕ್ಷ ಗಿರೀಶ್ ನಾಡಿಗ್, ಕಾರ್ಯದರ್ಶಿ ಶ್ರೀನಿವಾಸ್ ಜೋಶಿ, ಲೆಕ್ಕ ಪರಿಶೋಧಕ ವಿನಾಯಕ ಜೋಶಿ ಟಿ.ಎಚ್., ಸುಬ್ರಹ್ಮಣ್ಯ, ವ್ಯವಸ್ಥಾಪಕ ಜಿ.ಎನ್. ರಮೇಶ್ ಹಾಗೂ ದೇವಸ್ಥಾನದ ಪುರೋಹಿತರು ಉಪಸ್ಥಿತರಿದ್ದರು.

## ವಿಕಲಚೇತನರಿಂದ ವಿದ್ಯಾರ್ಥಿ ಶುಲ್ಕ ಮರುಪಾವತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಆ. 19 - ವಿಕಲಚೇತನರ ವಿದ್ಯಾರ್ಥಿ ಶುಲ್ಕ ಮರುಪಾವತಿ ಯೋಜನೆಯಡಿ ವಿಕಲಚೇತನ ವಿದ್ಯಾರ್ಥಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಸೆಪ್ಟೆಂಬರ್ 19 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ|| ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ಮಹಮ್ಮದ್ ಸಾಧಿಕ್ ಸಾಹೇಬ್ ನಿಧನ



ದಾವಣಗೆರೆ ಬಸವರಾಜ ಪೇಟೆ, ಹುಬ್ಬಳ್ಳಿ ಚೌಡಪ್ಪನ ಗಲ್ಲಿ, ಚಾರ್ಲಿ ಪೈಲ್ವಾನ್ ಆಟೋ ಸ್ಟ್ಯಾಂಡ್ ಹತ್ತಿರದ (# 91) ನೂರಾನಿ ಮಂಜಿಲ್ ವಾಸಿ, ಸಾಧಿಕ್ ಟ್ರ್ಯಾಕ್ಟರ್ ಗ್ಯಾರೇಜ್ ಮಾಲೀಕರಾದ **ಮಹಮ್ಮದ್ ಸಾಧಿಕ್ ಸಾಹೇಬ್** ಅವರು ದಿನಾಂಕ 19-8-2024ರ ಸೋಮವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತ್ನಿ, ಐವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20-8-2024ರ ಮಂಗಳವಾರ ಬೆಳಿಗ್ಗೆ 11.30 ಕ್ಕೆ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ರಜಾಕ್‌ವುಲ್ಲಾ, ಮೊ. : 94487 27141

## ಎಂಪಾಕ್ಸ್ : ವಿಮಾನ ನಿಲ್ದಾಣಗಳಲ್ಲಿ ನಿಗಾ

ನವದೆಹಲಿ, ಆ. 19 - ವಿಮಾನ ನಿಲ್ದಾಣಗಳು ಹಾಗೂ ಬಂದರುಗಳು ಎಂಪಾಕ್ಸ್ ಸೋಂಕಿನ ಲಕ್ಷಣ ಇರುವ ರೋಗಿಗಳ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಎಂಪಾಕ್ಸ್ ಚಿಕಿತ್ಸೆಗಾಗಿ ಕೇಂದ್ರ ಸರ್ಕಾರ ರಾಜಧಾನಿ ದೆಹಲಿಯಲ್ಲಿ ಮೂರು ಆಸ್ಪತ್ರೆಗಳನ್ನು ಗುರುತಿಸಿದೆ. ರಾಜ್ಯ ಸರ್ಕಾರಗಳು ಸಹ ಸೋಂಕಿಗೆ ಚಿಕಿತ್ಸೆ ನೀಡಲು ಆಸ್ಪತ್ರೆಗಳನ್ನು ಗುರುತಿಸಬೇಕು ಎಂದು ತಿಳಿಸಲಾಗಿದೆ.

## ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಸಪ್ತಾಹ

ದಾವಣಗೆರೆ ವರ್ತುಲ ರಸ್ತೆಯಲ್ಲಿರುವ ಶ್ರೀ ಸ.ಸ. ಮಾತೋಶ್ರೀ ಗೌರಮ್ಮಾಜಿ ಅಧ್ಯಾತ್ಮ ಮಂದಿರದಲ್ಲಿ ಶ್ರಾವಣ ಸಾಧನ ಸಪ್ತಾಹವು ನಡೆಯುತ್ತಿದೆ. ದಿನಾಂಕ 26ರಂದು ರಾತ್ರಿ 12 ಗಂಟೆಗೆ ಶ್ರೀ ಕೃಷ್ಣ ಜನ್ಮಾಷ್ಟಮಿ, ದಿನಾಂಕ 27ರ ಮಂಗಳವಾರ ಜಾಗರಣೆ ಮತ್ತು 28ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಪುಷ್ಪವೃಷ್ಟಿಗೈಯ್ಯುವ ಕಾರ್ಯಕ್ರಮ, ನಂತರ ಮಹಾಪ್ರಸಾದ ಜರುಗಲಿದೆ.


## ಹೊಸನಾಯಕನಹಳ್ಳಿಯಲ್ಲಿ ಇಂದು ದಂತ ತಪಾಸಣೆ, ಚಿಕಿತ್ಸಾ ಶಿಬಿರ

ದಾವಣಗೆರೆ ತಾಲ್ಲೂಕು ಹೊಸನಾಯಕನಹಳ್ಳಿ ಗ್ರಾಮದಲ್ಲಿ ದಾವಣಗೆರೆ ವಿವಿ ಸಮಾಜಕಾರ್ಯ ಅಧ್ಯಯನ ವಿಭಾಗದ ವತಿಯಿಂದ ಹಮ್ಮಿಕೊಂಡಿರುವ 'ಸಮಾಜಕಾರ್ಯ ಗ್ರಾಮೀಣ ಶಿಬಿರ'ದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಉಚಿತ ದಂತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ನಡೆಯಲಿದೆ.

ನಂತರ ಸಂಜೆ 5.30ಕ್ಕೆ ಸಂಪನ್ಮೂಲ ಉಪನ್ಯಾಸ ಕಾರ್ಯಕ್ರಮ ನಡೆಯಲಿದ್ದು, ಎಸ್‌ಡಿಎಂಸಿ ಅಧ್ಯಕ್ಷ ಕೆ.ಎಸ್. ದಿನೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಎ.ವಿ. ಬಸವರಾಜಪ್ಪ, ಎನ್. ಓಂಕಾರಪ್ಪ, ಗಂಗಮ್ಮ, ಶ್ರೀಶೈಲ ಪಟ್ಟಣಶೆಟ್ಟಿ, ಚನ್ನಕೇಶ, ರೇವಣಸಿದ್ಧಪ್ಪ, ಮಲ್ಲಿಕಾರ್ಜುನ, ರೇವಣಗೌಡ, ಎಂ. ನೀಲ್ ಕುಮಾರ್, ಅನಿತಾ ತಿಪ್ಪೇಸ್ವಾಮಿ, ಜಿ.ಟಿ. ಕುಬೇಂದ್ರಪ್ಪ, ರಹಮತ್ ಉಲ್ಲಾ, ನಿಂಗರಾಜು, ಶ್ವೇತಾ, ಕವಿತಾ, ನೇತ್ರಾವತಿ, ಸುಜಾತ, ತಿಮ್ಮಣ್ಣ ಮತ್ತಿತರರು ಭಾಗವಹಿಸಲಿದ್ದಾರೆ.


## ಚಿರಸ್ಮರಣೆ



ಜನನ : 04.05.1947

ಮರಣ : 20.08.2023

ದಿ. ಶ್ರೀ ಎ. ವೀರಭದ್ರಪ್ಪನವರು (ನಿವೃತ್ತ ಶಿಕ್ಷಕರು)

ನಮ್ಮೆಲ್ಲರಿಗೂ ದಾರಿದೀಪವಾಗಿ ಬದುಕಿಗೆ ಪ್ರೇರಕವಾಗಿ, ಭವಿಷ್ಯಕ್ಕೆ ಬೆಳಕಾಗಿ, ಆದರ್ಶರಾಗಿ ಬಾಳಿದ ನಿಮ್ಮ ನೆನಪು ಎಂದೆಂದಿಗೂ ನಮ್ಮಲ್ಲಿ ಅಜರಾಮರ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವವರು.

ನೆನಪಿನಲ್ಲಿ : ಪತ್ನಿ - ಶ್ರೀಮತಿ ದುಗ್ಗಮ್ಮ, ಸೊಸೆ & ಮಕ್ಕಳು, ಮೊಮ್ಮಕ್ಕಳು, ಶ್ರೀ ಗುರು ರುದ್ರೇಶ್ವರ ಡ್ರೆಸ್ ಲ್ಯಾಂಡ್ ಚಾಮರಾಜಪೇಟೆ, ದಾವಣಗೆರೆ.

ಮೊ : 80954 09771

## ನಾಲ್ಕನೇ ಪುಣ್ಯಸ್ಮರಣೆ





ದಿ|| ಶ್ರೀಮತಿ ಈರಮ್ಮ ಆನೆಕೊಂಡ (ದಿ|| ಆನೆಕೊಂಡ ಗೌಡ್ರು ದಾನಪ್ಪನವರ ಧರ್ಮಪತ್ನಿ) ನಿಧನ : 10.08.2020

ದಿ|| ಶ್ರೀ ಜಿ.ಡಿ. ದೇವರಾಜ ಮಾಲೀಕರು, ರುಚಿ ಪೇಂಟ್ಸ್ ಮತ್ತು ಗಣೇಶ ಶಾಮಿಯಾನ ಸಪ್ಲೈಯರ್ಸ್ ನಿಧನ : 20.08.2020

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು. ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿದೀಪ, ನಿಮ್ಮ ನೆನಪಿನಲ್ಲಿರುವ....

ಪತ್ನಿ : ಶ್ರೀಮತಿ ಸೌಮ್ಯ ದೇವರಾಜ್
ಪುತ್ರರು : ಜಿ.ಡಿ. ಧನುಷ್‌ಗೌಡ
ಜಿ.ಡಿ. ರುಚಿತ್‌ಗೌಡ
ಹಾಗೂ ಕುಟುಂಬ ವರ್ಗ

## ಮೂರನೇ ವರ್ಷದ ಪುಣ್ಯಸ್ಮರಣೆ



ದಿ. ಬಿ.ಜಿ. ಪ್ರಕಾಶ್

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು... ನಿಮ್ಮ ಆದರ್ಶಗಳೇ ನಮಗೆ ದಾರಿ ದೀಪ. ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಮತ್ತು ಸದಾ ನಿಮ್ಮ ಸ್ಮರಣೆಯಲ್ಲಿರುವ

ಇಂತಿ ದುಃಖತಪ್ತರು

ಶ್ರೀಮತಿ ಕಮಲಮ್ಮ ಮತ್ತು ಮಕ್ಕಳು, ಸಹೋದರರು ಬಂಧು-ಮಿತ್ರರು, ವಿನಾಯಕ ನಗರ, ದಾವಣಗೆರೆ.

ಮೊ: 94483 45683, 99648 48589



ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಪ್ರಗತಿಪರ ಸಾಧನೆಗಳ ಸರದಾರ,
ಸಾಮಾಜಿಕ ಪರಿವರ್ತನೆಯ ಹರಿಕಾರ, ಮಾಜಿ ಮುಖ್ಯಮಂತ್ರಿ

# ಡಿ. ದೇವರಾಜ ಅರಸು ಅವರ

## 109ನೇ ಜನ್ಮದಿನಾಚರಣೆ ಹಾಗೂ ಡಿ. ದೇವರಾಜ ಅರಸು ಪ್ರಶಸ್ತಿ ಪ್ರದಾನ ಸಮಾರಂಭ

ಡಿ. ದೇವರಾಜ ಅರಸುರವರ ಪ್ರತಿಮೆಗೆ ಮಾಲಾರ್ಪಣೆ : ದಿನಾಂಕ : 20.08.2024ರಂದು ಮಂಗಳವಾರ ಪೂರ್ವಾಹ್ನ 10.30 ಗಂಟೆಗೆ

ಸಾರ್ವಜನಿಕ ಸಮಾರಂಭ : ಪೂರ್ವಾಹ್ನ 11.00 ಗಂಟೆಗೆ, ಸ್ಥಳ : ವಿಧಾನಸೌಧದ ಬ್ಯಾಂಕ್ವೆಟ್ ಹಾಲ್

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 2024–25ನೇ ಸಾಲಿಗೆ ಅನುಷ್ಠಾನಗೊಳಿಸಲಾಗುವ ಯೋಜನೆಗಳು

### ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

- ಡಿ. ದೇವರಾಜ ಅರಸು ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ
- ಗಂಗಾ ಕಲ್ಯಾಣ ನೀರಾವರಿ ಯೋಜನೆ
- ಅರಿವು-ಶೈಕ್ಷಣಿಕ ಸಾಲ ಯೋಜನೆ
- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ
- ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ
- ಸ್ವಾವಲಂಬಿ ಸಾರಥಿ (ನಾಲ್ಕು ಚಕ್ರಗಳ ವಾಹನ ಖರೀದಿಗೆ) ಸಹಾಯಧನ ಯೋಜನೆ
- ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕು ಸಹಯೋಗದೊಂದಿಗೆ)
- ಹೊಲಿಗೆ ಯಂತ್ರ ವಿತರಣಾ ಯೋಜನೆ

### ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತ

- ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕು ಸಹಯೋಗದೊಂದಿಗೆ)
- ಅರಿವು-ಶೈಕ್ಷಣಿಕ ಸಾಲ ಯೋಜನೆ
- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು
- ಗಂಗಾ ಕಲ್ಯಾಣ ನೀರಾವರಿ ಯೋಜನೆ
- ಬ್ಯಾಂಕುಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಯೋಜನೆ
- ಸ್ವಾವಲಂಬಿ ಸಾರಥಿ ಯೋಜನೆ

### ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿಯಮಿತ

- ಸ್ವಯಂ ಉದ್ಯೋಗ ಸಾಲ ಮತ್ತು ಸಹಾಯಧನ ಯೋಜನೆ
- ಬ್ಯಾಂಕುಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಯೋಜನೆ
- ಗಂಗಾ ಕಲ್ಯಾಣ ನೀರಾವರಿ ಯೋಜನೆ
- ಅರಿವು-ಶೈಕ್ಷಣಿಕ ಸಾಲ ಯೋಜನೆ
- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು
- ಸ್ವಾವಲಂಬಿ ಸಾರಥಿ ಯೋಜನೆ

### ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ

- ಜೀಜಾವು - ಜಲಭಾಗ್ಯ ಯೋಜನೆ (ಗಂಗಾ ಕಲ್ಯಾಣ ನೀರಾವರಿ ಯೋಜನೆ)
- ಶ್ರೀ ಶಹಜೀರಾಜೀ ಸಮೃದ್ಧಿ ಯೋಜನೆ (ಸ್ವಯಂ ಉದ್ಯೋಗ ನೇರ ಸಾಲ ಯೋಜನೆ)
- ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ
- ಅರಿವು-ಶೈಕ್ಷಣಿಕ ಸಾಲ ಯೋಜನೆ
- ರಾಜಶ್ರೀ ಸಾಹು ಮಹರಾಜ ವಿದೇಶಿ ವ್ಯಾಸಂಗ ಯೋಜನೆ
- ಮರಾಠ ಮಿಲ್ಟ್ರಿ ಹೋಟೆಲ್ ಯೋಜನೆ

### ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತ

- ಸ್ವಯಂ ಉದ್ಯೋಗ ಸಾಲ ಮತ್ತು ಸಹಾಯಧನ ಯೋಜನೆ
- ಗಂಗಾ ಕಲ್ಯಾಣ ನೀರಾವರಿ ಯೋಜನೆ
- ಅರಿವು-ಶೈಕ್ಷಣಿಕ ಸಾಲ ಯೋಜನೆ
- ಬ್ಯಾಂಕುಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಯೋಜನೆ
- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು
- ಸ್ವಾವಲಂಬಿ ಸಾರಥಿ ಯೋಜನೆ

### ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ

- ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
- ಅರಿವು-ಶೈಕ್ಷಣಿಕ ಸಾಲ ಯೋಜನೆ
- ಗಂಗಾ ಕಲ್ಯಾಣ ನೀರಾವರಿ ಯೋಜನೆ
- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು
- ಸ್ವಾವಲಂಬಿ ಸಾರಥಿ ಯೋಜನೆ

### ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ

- ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು ಸಾಲ ಯೋಜನೆ
- ಸ್ವಯಂ ಉದ್ಯೋಗ ಸಾಲ ಯೋಜನೆ
- ಅರಿವು-ಶೈಕ್ಷಣಿಕ ಸಾಲ ಯೋಜನೆ
- ಗಂಗಾ ಕಲ್ಯಾಣ ನೀರಾವರಿ ಯೋಜನೆ
- ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ
- ಬ್ಯಾಂಕು ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ
- ಸ್ವಾವಲಂಬಿ ಸಾರಥಿ ಯೋಜನೆ
- ವಿದೇಶಿ ವ್ಯಾಸಂಗ ಸಾಲ ಯೋಜನೆ

### ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ

- ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
- ಅರಿವು-ಶೈಕ್ಷಣಿಕ ಸಾಲ ಯೋಜನೆ
- ಗಂಗಾ ಕಲ್ಯಾಣ ನೀರಾವರಿ ಯೋಜನೆ
- ವಿದೇಶಿ ವ್ಯಾಸಂಗ ಸಾಲ ಯೋಜನೆ
- ಸ್ವಾವಲಂಬಿ ಸಾರಥಿ ಯೋಜನೆ
- ಬ್ಯಾಂಕುಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಯೋಜನೆ
- ಸ್ವಾತಂತ್ರ್ಯ ಅಮೃತ ಮುನ್ನಡೆ ಯೋಜನೆ (ಕೌಶಲ್ಯಾಭಿವೃದ್ಧಿ ತರಬೇತಿ)

### ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ

- ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯಧನ ಯೋಜನೆ
- ಬ್ಯಾಂಕುಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಯೋಜನೆ
- ಗಂಗಾ ಕಲ್ಯಾಣ ನೀರಾವರಿ ಯೋಜನೆ
- ಅರಿವು-ಶೈಕ್ಷಣಿಕ ಸಾಲ ಯೋಜನೆ
- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು
- ಸ್ವಾವಲಂಬಿ ಸಾರಥಿ ಯೋಜನೆ

**ಮೇಲಿನ ಎಲ್ಲಾ ಯೋಜನೆಗಳಿಗೆ ಸೇವಾಸಿಂಧು ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ : 31.08.2024**

### ಕರ್ನಾಟಕ ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ

- ಬಸವ ಬೆಳಗು ಹಾಗೂ ವಿದೇಶ ವಿದ್ಯಾವಿಕಾಸ ಯೋಜನೆ
- ಜೀವಜಲ ಯೋಜನೆ
- ಕಾಯಕ ಕಿರಣ ಯೋಜನೆ
- ಭೋಜನಾಲಯ ಕೇಂದ್ರ
- ವಿಭೂತಿ ನಿರ್ಮಾಣ ಘಟಕ
- ಸ್ವಾವಲಂಬಿ ಸಾರಥಿ ಯೋಜನೆ (ಬ್ಯಾಂಕುಗಳ ಸಹಯೋಗದೊಂದಿಗೆ )
- ಸ್ವಯಂ ಉದ್ಯೋಗ ಸಾಲ ಯೋಜನೆ (ಬ್ಯಾಂಕುಗಳ ಸಹಯೋಗದೊಂದಿಗೆ )
- ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ

**ಡಿ. ದೇವರಾಜ ಅರಸು ಜನ್ಮದಿನಾಚರಣೆ ಹಾಗೂ ಡಿ. ದೇವರಾಜ ಅರಸು ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಸರ್ವರಿಗೂ ಆದರದ ಸ್ವಾಗತ**

**ಸರ್ವರಿಗೂ ಆದರದ ಸ್ವಾಗತ**

ಸರ್ಕಾರದ ಕಾರ್ಯದರ್ಶಿಗಳು,
ಎಲ್ಲಾ ನಿಗಮಗಳ ಅಧ್ಯಕ್ಷರು ಹಾಗೂ
ಎಲ್ಲಾ ನಿಗಮಗಳ
ವ್ಯವಸ್ಥಾಪಕ ನಿರ್ದೇಶಕರುಗಳು

ನುಡಿದಂತೆ ನಡೆದಿದ್ದೇವೆ...

ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ | ಅನ್ನಭಾಗ್ಯ – ಬಡವರಿಗೆ ಪ್ರತಿ ತಿಂಗಳು 10 kg | ಗೃಹಲಕ್ಷ್ಮಿ – ₹2000 | ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
–ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

CMofKarnataka https://dipr.karnataka.gov.in/

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಕರ್ನಾಟಕ ವಾರ್ತೆ – ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ERA GROUP OF COMPANIES**
**CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
Only for Girls / Ladies,
Qualification : SSLC to Degree,
Salary - 7000 to 10000/-
ಸ್ಥಳ : KR Market, Davanagere
95350 51589, 78670 75786

**ಫ್ಯಾಕ್ಟರಿ ಬಿಲ್ಡಿಂಗ್ ಬಾಡಿಗೆಗೆ ಇದೆ**
ಪಿ.ಬಿ. ರಸ್ತೆಯ ಸಮೀಪವಿರುವ ಕರೂರ್ ಇಂಡಸ್ಟ್ರೀಯಲ್ ಏರಿಯಾ ದಲ್ಲಿ 20HP ಪವರ್ ಇರುವ ಬಿಲ್ಡಿಂಗ್, ಆಫೀಸ್ ರೂಮ್ ಕೂಡ ಇದೆ. ನೀರಿನ ಸೌಲಭ್ಯವಿದ್ದು, ವಾಸ್ತು ಪ್ರಕಾರ ಇದೆ. ಆಸಕ್ತರು ಸಂಪರ್ಕಿಸಿ :
98444 94996

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್, ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಕೆಲಸಕ್ಕೆ ಹುಡುಗರು ಮತ್ತು ಡ್ರೈವರ್ ಬೇಕಾಗಿದ್ದಾರೆ. ವಯೋಮಿತಿ : 35ರ ಒಳಗೆ, ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಸೈಟುಗಳು ಮಾರಾಟಕ್ಕಿವೆ**
ಕೊಂಡಜ್ಜಿ - ಬುಳ್ಳಾಪುರದಲ್ಲಿ, ಕೆಹೆಚ್‌ಬಿ ಲೇಔಟ್‌ನಲ್ಲಿ 25x30 ಅಳತೆಯ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
96111 44565
97434 47178

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80East, 50x80 West, 40x60 North, 40x60 East, 30x50 West, 40 ಅಡಿ ರೋಡಿಗಿದೆ, ಎದುರುಗಡೆ ಪಾರ್ಕ್ ಇದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗದಲ್ಲಿ 30x40, 30x40 East ಅಕ್ಕ-ಪಕ್ಕ, 30x60 North, Rate - 2600/- 40x50 North-East Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ, 30x40 ಪೂರ್ವ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ ಫೈನಲ್ ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ. 20x45, 20x45 (ಅಕ್ಕಪಕ್ಕ) ಪೂರ್ವ ಉತ್ತರ ಕಾರ್ನರ್ ಸೈಟುಗಳು. ದರ 2,500/- ಬ್ಯಾಂಕ್ ಲೋನ್ ಆಗುತ್ತದೆ.
ಮೊ : 9740258276

**HOUSE TO LET**
Newly Built Independent Well Furnished House,
(Vegetarian only)
Near Police Quarters,
JH Patel Nagar Davangere
99868 86464

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳಿಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ಚನ್ನಗಿರಿ, ಹೊಳಲ್ಕೆರೆ ಹೊನ್ನಾಳಿ, ಹೊಸದುರ್ಗ, ಚಿತ್ರದುರ್ಗ, ಚಳಕೇರಿ, ಹಿರಿಯೂರು ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ಐ.ಟಿ.ಐ. ಮತ್ತು ಡಿಪ್ಲೋಮಾ ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರುವವರು ತಕ್ಷಣವೇ ಬೇಕಾಗಿದ್ದಾರೆ.
ಮೊ.: 9738735156, 9886515100

**ಬೇಕಾಗಿದ್ದಾರೆ**
ACE TRACTOR SHOWROOM ಗಾಗಿ
ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
80952 54434, 9448202030

**WANTED**
PUC or Degree Pass or Fail
Computer Knowledge is must
EXCELLENT ELECTRONICS
# 2137/1, 4th Main, 3rd Cross, MCC `A' Block, Davangere - 577 002.
Contact No.
98865 15100

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಮಳಿಗೆಗಳು ಬಾಡಿಗೆಗೆ ಇವೆ**
ಕೆಟಿಜೆ ನಗರ 3ನೇ ಮೇನ್, 8ನೇ ಕ್ರಾಸ್, ವಿದ್ಯಾರ್ಥಿ ಭವನದ ಹತ್ತಿರ ಗ್ರೌಂಡ್ ಫ್ಲೋರ್‌ನ ಮಳಿಗೆ, ಕ್ಲಿನಿಕ್‌ಗೆ, ಬ್ಯೂಟಿ ಪಾರ್ಲರ್‌ಗೆ, ಟೈಲರಿಂಗ್‌ಗೆ, ಡಿಸ್ಟ್ರಿಬ್ಯೂಟರ್‌ಗೆ ಯೋಗ್ಯವಾಗಿದೆ. ಫಸ್ಟ್ ಫ್ಲೋರ್‌ನಲ್ಲಿ ಕ್ಲಿನಿಕ್‌ಗೆ, ಬ್ಯೂಟಿ ಪಾರ್ಲರ್‌ಗೆ, ಟೈಲರಿಂಗ್‌ಗೆ, ಆಫೀಸ್‌ಗೆ ಯೋಗ್ಯವಾದ ಮಳಿಗೆ ಬಾಡಿಗೆಗೆ ಇದೆ.
88678 45126, 99166 68637

**ಕೆಲಸಕ್ಕೆ ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ ಕಂ ರಿಸಪ್ಷನಿಸ್ಟ್ (ಮಹಿಳೆ)-1 ವಿದ್ಯಾರ್ಹತೆ : 10ನೇ/ಪಿಯುಸಿ ಟೈಲರಿಂಗ್ ಆದವರಿಗೆ ಆದ್ಯತೆ. ಟೆಕ್ನಿಕಲ್ ಅಸಿಸ್ಟೆಂಟ್ (ಪುರುಷ)-1, ವಿದ್ಯಾರ್ಹತೆ : PUC ದ್ವಿ-ಚಕ್ರ ವಾಹನವುಳ್ಳವರಿಗೆ ಆದ್ಯತೆ.
ಮಾಸಿಕ ವೇತನ : 8000-12000
95915 01592

**Sri Nidhi Educational Trust (R)**
**ನೇರ ಪರೀಕ್ಷೆಗಳು**
SSLC, PUC, BA, B.Com, BCA, MA, M.Com, M.Sc, Diploma Course, BE, B.Tech, B.Lib, M.Lib, MBA, MCA & All Courses
77609 55550

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್
(ಊಟ, ತಿಂಡಿ ಕೊಡಲಾಗುವುದು)
ಸಂಪರ್ಕಿಸಿ.
ಎಸ್.ಟಿ. ಸೋಮಶೇಖರ್
ಮೊ : 98803 37686

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಪೆಟ್ರೋಲ್‌ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
81478 03755
70266 43088

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರ ಸಭೆ ಡೋ. ನಂ. ಬ್ಯಾಂಕ್ ಸಾಲ ಸೌಲಭ್ಯವಿರುವ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**ಕೆಲಸಗಾರರು ಬೇಕಾಗಿದ್ದಾರೆ**
ಹಾರ್ಡ್‌ವೇರ್ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಯಲ್ಲಮ್ಮ ನಗರ, 6ನೇ ಕ್ರಾಸ್, ರಿಂಗ್ ರೋಡ್, ದಾವಣಗೆರೆ.
990027 04005

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಬೇಕಾಗಿದ್ದಾರೆ**
ಮಹಿಳೆಯರು / ಪುರುಷರು SSLC ಪಾಸ್ ಅಥವಾ ಫೇಲ್, ಸೂಪರ್ ಮಾರ್ಕೆಟ್‌ನಲ್ಲಿ ಅನುಭವವುಳ್ಳವರು CINDRELL CHOCOLATE, ವಿದ್ಯಾನಗರ, 1st Bus Stop, ಬಚ್ಚಪನ್ ಶಾಲೆ, ಎದುರು ದಾವಣಗೆರೆ.
74831 63876, 99165 80080

**ಇಟ್ಟಿಗೆ (MOULD BRICKS) ಫ್ಯಾಕ್ಟರಿ ಬಾಡಿಗೆಗೆ / ಲೀಸ್‌ಗೆ**
ಜರೀಕಟ್ಟೆ-ಮಲೇಬೆನ್ನೂರು ರಸ್ತೆ, ದಾವಣಗೆರೆ ತಾ. ಮತ್ತು ಜಿಲ್ಲೆ.
99017 74089, 93802 99918

ಜನ ಆಶಾ ಸೌತ್ ನಿಧಿ ಲಿಮಿಟೆಡ್
**ಪಿಗ್ಮಿ ಏಜೆಂಟರು ಬೇಕಾಗಿದ್ದಾರೆ**
**RBI Approved**
ಜನ ಆಶಾ ಸ್ಮಾರ್ಟ್ ಬ್ಯಾಂಕ್ H.O. ಮೈಸೂರು ದಾವಣಗೆರೆ ಶಾಖೆಯಲ್ಲಿ ನಗರ ವಲಯದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Salary, Incentive & PF, Health Insurance ಸೌಲಭ್ಯವಿರುತ್ತದೆ
99720 42558, 96864 12409

**WANTED**
ACCOUNTANTS - 1
(3-5 years Experience)
Shamanur Sugars Ltd.,
374, 4th main, PJ Extensions, Davangere.
98441 20003

**INDUSTRIAL NA LAND FOR SALE**
(2 acres 10 guntas)
10 km from Davanagere.
CC Road, Approach
91489 09259

**ಲೀಸ್ ಗೆ / ಬಾಡಿಗೆಗಿದೆ**
1ನೇ ಮಹಡಿ 40x40, 10x15ಅಡಿಯ ಒಟ್ಟು 9 ರೂಂಗಳು, ದಕ್ಷಿಣ ಬಾಗಿಲು 2ನೇ ಮಹಡಿ 40x40, 20x20 ಅಡಿಯ ಒಟ್ಟು 4 ರೂಂಗಳು ಲಭ್ಯವಿವೆ. ಮಾರ್ಕೆಟಿಂಗ್ ಕಂಪನಿ / ಹಾಸ್ಟೆಲ್ / ಕಂಪ್ಯೂಟರ್ / ಟೈಲರಿಂಗ್ ನಡೆಸಲು ಯೋಗ್ಯವಾಗಿದೆ. ಬೋರ್ ವೆಲ್, ಕಾರ್ಪೊರೇಷನ್ ನೀರು, ಪಾರ್ಕಿಂಗ್ ವ್ಯವಸ್ಥೆ ಇದೆ. ವಿಜಯನಗರ, 3ನೇ ಕ್ರಾಸ್, ಏರ್ ಟೆಲ್ ಟವರ್ ಹತ್ತಿರ, ಹೊಸ RTO ಆಫೀಸ್ ಎದುರು, ದಾವಣಗೆರೆ.
99022 99961 / 97417 46205
73493 97287 / 84312 55250

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ


## ಶ್ರೀ ಮುರುಘರಾಜೇಂದ್ರ ಕೋ - ಆಪರೇಟಿವ್ ಬ್ಯಾಂಕ್ ಲಿ.

ಕೇಂದ್ರ ಕಛೇರಿ : ನಂ. 1058/3-4, ಲಾಯರ್ ರೋಡ್, ಜಯದೇವ ಸರ್ಕಲ್, ಕೆಬಿ. ಬಡಾವಣೆ, ದಾವಣಗೆರೆ 02

### ಸ್ಥಿರಾಸ್ತಿ ಕಬ್ಜಾ ನೋಟೀಸು

**ಹಣಕಾಸಿನ ಆಸ್ತಿಗಳ ಪ್ರತಿಭೂತಿಕರಣ ಮತ್ತು ಪುನರ್ ನಿರ್ಮಾಣ ಹಾಗೂ ಪ್ರತಿಭೂತಿ ಹಿತಾಸಕ್ತಿ ಕಾಯ್ದೆ - 2002 ನಿಯಮ 8 (1)**

**ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ,** ಈ ಬ್ಯಾಂಕಿನ ಅಧಿಕಾರಯುಕ್ತ ಅಧಿಕಾರಿ, ಈ ಕೆಳಗೆ ಕಾಣಿಸಿದ ಸಾಲಗಾರರಿಗೆ/ಜಾಮೀನುದಾರರಿಗೆ ತಮ್ಮ ಸಾಲದ ಬಾಕಿ ರಕಮನ್ನು ಬಡ್ಡಿ ಸಹಿತವಾಗಿ ಬ್ಯಾಂಕು ನೋಟೀಸು ಜಾರಿ ಮಾಡಿದ 60 ದಿನಗಳಲ್ಲಿ ಮರುಪಾವತಿ ಮಾಡಲು ಹಣಕಾಸಿನ ಆಸ್ತಿಗಳ ಪ್ರತಿಭೂತಿಕರಣ ಮತ್ತು ಪುನರ್‌ನಿರ್ಮಾಣ ಹಾಗೂ ಪ್ರತಿಭೂತಿ ಹಿತಾಸಕ್ತಿ ಕಾಯ್ದೆ (SRDESI)-2002ರ ಪ್ರಕಾರ ನೋಟೀಸು ನೀಡಿದಾಗಲೂ ಮರುಪಾವತಿ ಮಾಡಲು ವಿಫಲರಾಗಿರುತ್ತಾರೆ. ಆದ್ದರಿಂದ ಸದರಿ ಅಧಿನಿಯಮ ಕಲಂ 13(4)ರ ಅಡಿಯಲ್ಲಿ ಸದರಿ ಸಾಲಗಾರರ ಈ ಕೆಳಗೆ ವರ್ಣಿಸಿದ ಆಸ್ತಿಯನ್ನು **ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ. 1058/3-4, ಲಾಯರ್ ರಸ್ತೆ, ಜಯದೇವ ಸರ್ಕಲ್, ದಾವಣಗೆರೆ 577 002** ಇದರ ಅಧಿಕಾರಯುಕ್ತ ಅಧಿಕಾರಿ ಕಬ್ಜಾ ಪಡೆದುಕೊಂಡಿದ್ದು, ಸದರಿ ಆಸ್ತಿಯ ಕುರಿತು ಸದರಿ ಸಾಲಗಾರರಲ್ಲಿ ಅಥವಾ ಯಾವುದೇ ಸಾರ್ವಜನಿಕರಾಗಲೀ ವ್ಯವಹರಿಸತಕ್ಕದ್ದಲ್ಲ. ಹಾಗೇನಾದರೂ ವ್ಯವಹರಿಸಿದ್ದಲ್ಲಿ ಶ್ರೀ ಮುರುಘರಾಜೇಂದ್ರ ಕೋ-ಆಪ್ ಬ್ಯಾಂಕ್ ಲಿ., ದಾವಣಗೆರೆ ಇವರಿಗೆ ಬರಬೇಕಾದ ಸಾಲದ ಬಾಕಿ ಹಣ ಮತ್ತು ಭೋಜಾದೊಂದಿಗೆ ಒಳಪಟ್ಟು ವ್ಯವಹರಿಸಬೇಕಾಗುತ್ತದೆ.

**1. ಸಾಲಗಾರರು ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ : ಶ್ರೀಮತಿ ಬಿ.ಆರ್. ಕಮಲ ಕೋಂ ಶ್ರೀ ಎ.ಪಿ.ಸಿ ಮಹೇಶ್ವರಪ್ಪ,** 'ಶ್ರೀನಿವಾಸ ನಿಲಯ', 14ನೇ ಕ್ರಾಸ್, ಬಾಪೂಜಿ ಪೌಢಶಾಲೆ ಹಿಂಭಾಗ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ - 577 004. **ಜಾಮೀನುದಾರರು : ಶ್ರೀ ಎ.ಪಿ.ಸಿ. ಮಹೇಶ್ವರಪ್ಪ ಬಿನ್ ವಿ.ಚನ್ನಬಸಪ್ಪ,** 'ಶ್ರೀನಿವಾಸ ನಿಲಯ', 14ನೇ ಕ್ರಾಸ್, ಬಾಪೂಜಿ ಪೌಢಶಾಲೆ ಹಿಂಭಾಗ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ - 577 004. **ಶ್ರೀ ಕೆ.ಸಿ. ಲಿಂಗರಾಜ್ ಬಿನ್ ಕೆ.ಜಿ. ಚನ್ನಬಸಪ್ಪ,** 'ಶಿವಲಿಂಗ ನಿಲಯ', ಹಳೇ ಅಂಚೆ ಕಛೇರಿ ಹಿಂಭಾಗದ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ - 577 002.

ಖಾತೆ ಸಂಖ್ಯೆ : **101600000828** | ಬ್ಯಾಂಕಿಗೆ ಬರಬೇಕಾದ ಒಟ್ಟು ಮೊತ್ತ :**ರೂ. 33,28,973/-** + ಮುಂದಿನ ಬಡ್ಡಿ ಹಾಗೂ ಇತರೆ

**ಬ್ಯಾಂಕಿಗೆ ಅಡಮಾನವಿಟ್ಟ ಸ್ಥಿರಾಸ್ತಿ ಮತ್ತು ಆಸ್ತಿಯ ಚಕ್ಕುಬಂದಿ ವಿವರಗಳು :** ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ, ದಾವಣಗೆರೆ ಸಿಟಿ, 5ನೇ ವಾರ್ಡ್, 7ನೇ ಡಿವಿಜನ್, ಕೆ.ಬಿ. ಬಡಾವಣೆಯಲ್ಲಿ ಬರತಕ್ಕ ಹಳೇ ಡೋರ್ ನಂ. 752/3 ರಿಂದ 6, ನಂತರದ ಡೋರ್ ನಂ. 1518/3 ರಿಂದ 6 ವುಳ್ಳ ಸ್ವತ್ತಿನ ಅಳತೆ, 30x40 ಅಡಿ ಪೈಕಿ ದಾನವಾಗಿ ಪಡೆದ ಪೂರ್ವಭಾಗದ ಸ್ವತ್ತಿನ ದಾವಣಗೆರೆ ಮಹಾನಗರ ಪಾಲಿಕೆಯ ಖಾತೆ ನಂ. .4185 ರಿಂದ 4186, ಡೋರ್ ನಂ. 752/3 ರಿಂದ 6, ಹೊಸ ನಂ. 1518/3,6 ಇದರ ಅಳತೆ ಪೂರ್ವ - ಪಶ್ಚಿಮ : 15 ಅಡಿ, ಉತ್ತರ - ದಕ್ಷಿಣ : 40 ಅಡಿ (15x40 ಅಡಿ) ವುಳ್ಳ ಜಾಗ ಮತ್ತು ಸದರಿ ಜಾಗದಲ್ಲಿ ಸುಮಾರು 50 ವರ್ಷದ ಹಿಂದೆಯೇ ನಿರ್ಮಿಸಿರುವ RCC ರೂಫಿಂಗ್‌ನ ಗ್ರೌಂಡ್ ಫ್ಲೋರ್, ಫಸ್ಟ್ ಫ್ಲೋರ್, ಸೆಕೆಂಡ್ ಫ್ಲೋರ್ ಮತ್ತು ಥರ್ಡ್ ಫ್ಲೋರ್‌ವುಳ್ಳ ವಾಸದ ಮನೆಗಳು. ಈ ಮನೆಗಳ ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಕಾಮನ್ ಹಕ್ಕು ಇದ್ದು, ವಿದ್ಯುಚ್ಛಕ್ತಿ, ನೀರು, ಶೌಚಾಲಯದ ಸೌಕರ್ಯ ಒಳಗೊಂಡ 15x40 ಅಡಿ ಸೊತ್ತಿಗೆ ಚಕ್ಕುಬಂದಿ ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಎ.ಪಿ.ಸಿ. ಶರಣಪ್ಪನವರ ಮನೆ, ಉತ್ತರಕ್ಕೆ : ಕನ್ಸರ್ವೆನ್ಸಿ, ದಕ್ಷಿಣಕ್ಕೆ : ರಸ್ತೆ. ಈ ಆಸ್ತಿಯು ಶ್ರೀಮತಿ ಬಿ.ಆರ್. ಕಮಲ ಕೋಂ ಎಪಿಸಿ ಮಹೇಶ್ವರಪ್ಪನವರ ಹೆಸರಿನಲ್ಲಿರುತ್ತದೆ.

**2. ಸಾಲಗಾರರು ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ : ಶಿವಕುಮಾರ್ ಚಾರ್ಮನಿ S/o ಜಯಪ್ಪ ಚಾರ್ಮನಿ,** ಡೋ.ನಂ. 492/5, ಬೆಳ್ಳೂಡಿಗಲ್ಲಿ, ಬಕ್ಕೇಶ್ವರ ದೇವಸ್ಥಾನ ಹಿಂಭಾಗ, ದಾವಣಗೆರೆ. **ಜಾಮೀನುದಾರರು : ಶ್ರೀ ತುಕ್ಕಪ್ಪ S/o ನಾರಾಯಣಪ್ಪ,** ಶ್ರೀ ಕರಿಬಸವೇಶ್ವರ ವುಡ್ ಇಂಡಸ್ಟ್ರೀಸ್, ಬಂಬೂ ಬಜಾರ್,ದಾವಣಗೆರೆ - 577 001. **ಶ್ರೀ ರವಿಶಂಕರ್ ವೈ. S/o ಚಾರ್ಮನಿ ಕಾಂಪೌಂಡ್,** ಬೆಳ್ಳೂಡಿ ಗಲ್ಲಿ, ದಾವಣಗೆರೆ - 577 001.

ಖಾತೆ ಸಂಖ್ಯೆ : **101600000815** | ಬ್ಯಾಂಕಿಗೆ ಬರಬೇಕಾದ ಒಟ್ಟು ಮೊತ್ತ :**ರೂ. 36,81,518/-** + ಮುಂದಿನ ಬಡ್ಡಿ ಹಾಗೂ ಇತರೆ

**ಬ್ಯಾಂಕಿಗೆ ಅಡಮಾನವಿಟ್ಟ ಸ್ಥಿರಾಸ್ತಿ ಮತ್ತು ಆಸ್ತಿಯ ಚಕ್ಕುಬಂದಿ ವಿವರಗಳು :** ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ಸಿಟಿ, 6ನೇ ಡಿವಿಜನ್,ಚೌಕಿ ಗುಂಡಿ, ಮುರಿಗೆಪ್ಪ ಗಲ್ಲಿ ಹಿಂದೆ ಬರತಕ್ಕ ಡೋರ್ ನಂಬರ್ 559/1 ರಿಂದ 5 ಉಳ್ಳ, ಸೊತ್ತಿನ ಅಳತೆ 30x40 ಅಡಿ ಉಳ್ಳ ಜಾಗ. ಇದರ ಚಕ್ಕುಬಂದಿ ಈ ಕೆಳಗಿನಂತಿದೆ : ಪೂರ್ವಕ್ಕೆ : ಐಯ್ಯನಹಳ್ಳಿ ಶರಣಪ್ಪ ಅವರ ಜಾಗ, ಪಶ್ಚಿಮಕ್ಕೆ : ಬಸವರಾಜಪ್ಪ ಅವರ ಜಾಗ, ಉತ್ತರಕ್ಕೆ : ಕನ್ಸರ್ವೆನ್ಸಿ, ದಕ್ಷಿಣಕ್ಕೆ : ಬೆಳ್ಳುಳ್ಳಿ ಮುರಿಗೆಪ್ಪ ಗಲ್ಲಿ. ಈ ಆಸ್ತಿಯು ಶ್ರೀ ಶಿವಕುಮಾರ್ ಚಾರ್ಮನಿ S/o ಜಯಪ್ಪ ಚಾರ್ಮನಿಯವರ ಹೆಸರಿನಲ್ಲಿರುತ್ತದೆ.

ಸ್ಥಳ : ದಾವಣಗೆರೆ
ದಿನಾಂಕ : 19.08.2024

ಸಹಿ/- ಅಧಿಕಾರಯುಕ್ತ ಅಧಿಕಾರಿ,
ಶ್ರೀ ಮುರುಘರಾಜೇಂದ್ರ ಕೋ-ಆಪ್ ಬ್ಯಾಂಕ್ ಲಿ., ದಾವಣಗೆರೆ.

# ರೈಲುಗಳ ತಾತ್ಕಾಲಿಕ ನಿಲುಗಡೆ ಮುಂದುವರಿಕೆ



**ಹಳ್ಳಿಗುಡಿ ಹಾಲ್ಟ್: ರೈಲುಗಳ ತಾತ್ಕಾಲಿಕ ನಿಲುಗಡೆ ಮುಂದುವರಿಕೆ**

ಶ್ರೀ ಸಿದ್ಧಾರೂಢ ಸ್ವಾಮೀಜಿ ಹುಬ್ಬಳ್ಳಿ ಮತ್ತು ಸಿಂಧನೂರು ನಿಲ್ದಾಣಗಳ ನಡುವೆ ಪ್ರತಿ ದಿನ ಸಂಚರಿಸುವ ಪ್ಯಾಸೆಂಜರ್ ಸ್ಪೆಷಲ್ ರೈಲುಗಳಿಗೆ (ರೈಲು ಸಂಖ್ಯೆ 07381/07382) ಹಳ್ಳಿಗುಡಿ ಹಾಲ್ಟ್ ನಿಲ್ದಾಣದಲ್ಲಿ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆ ಸೌಲಭ್ಯವನ್ನು ಸೆಪ್ಟೆಂಬರ್ 1, 2024 ರಿಂದ ಫೆ. 28, 2025 ರವರೆಗೆ ಅಸ್ತಿತ್ವದಲ್ಲಿರುವ ಸಮಯದೊಂದಿಗೆ ಆರು ತಿಂಗಳವರೆಗೆ ಮುಂದುವರಿಸಲಾಗುತ್ತಿದೆ.

**ರೈಲುಗಳ ಸಂಚಾರ ಭಾಗಶಃ ರದ್ದು**

ಅರಸೀಕೆರೆ ಯಾರ್ಡ್‌ನಲ್ಲಿ ಸುರಕ್ಷತೆಗೆ ಸಂಬಂಧಿಸಿದ ಕಾಮಗಾರಿ ಕೈಗೊಳ್ಳುವ ಸಲುವಾಗಿ, ಈ ಕೆಳಗಿನ ರೈಲುಗಳನ್ನು ಭಾಗಶಃ ರದ್ದು, ಸಮಯ ಮರು ನಿಗದಿ ಮತ್ತು ನಿಯಂತ್ರಿಸಲಾಗುತ್ತಿದೆ. ಅವುಗಳು ಈ ಕೆಳಗಿನಂತಿವೆ:

**ಭಾಗಶಃ ರದ್ದು:**

ರೈಲು ಸಂಖ್ಯೆ 16214 ಎಸ್‌ಎಸ್‌ಎಸ್ ಹುಬ್ಬಳ್ಳಿ-ಅರಸೀಕೆರೆ ಡೈಲಿ ಎಕ್ಸ್‌ಪ್ರೆಸ್ ರೈಲು ಆಗಸ್ಟ್ 26, ಸೆಪ್ಟೆಂಬರ್ 2, 9, 16, 21, 23, 28, 30, ಅಕ್ಟೋಬರ್ 5 ಮತ್ತು 14, 2024 ರಂದು ಬೀರೂರು-ಅರಸೀಕೆರೆ ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳಿಸಲಾಗುತ್ತಿದೆ.

ರೈಲು ಸಂಖ್ಯೆ 16213 ಅರಸೀಕೆರೆ-ಎಸ್‌ಎಸ್‌ಎಸ್ ಹುಬ್ಬಳ್ಳಿ ಡೈಲಿ ಎಕ್ಸ್‌ಪ್ರೆಸ್ ರೈಲು ಆಗಸ್ಟ್ 27, ಸೆಪ್ಟೆಂಬರ್ 3, 10, 17, 22, 24, 29, ಅಕ್ಟೋಬರ್ 1, 6 ಮತ್ತು 15, 2024 ರಂದು ಅರಸೀಕೆರೆ-ಬೀರೂರು ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳಿಸಲಾಗುತ್ತಿದೆ.

ರೈಲು ಸಂಖ್ಯೆ 06213 ಅರಸೀಕೆರೆ-ಮೈಸೂರು ಡೈಲಿ ಪ್ಯಾಸೆಂಜರ್ ಸ್ಪೆಷಲ್ ರೈಲು ಆಗಸ್ಟ್ 27, ಸೆಪ್ಟೆಂಬರ್ 3, 10, 17, 24, ಅಕ್ಟೋಬರ್ 1 ಮತ್ತು 15, 2024 ರಂದು ಅರಸೀಕೆರೆ-ಹಾಸನ ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳಿಸಲಾಗುತ್ತಿದೆ.

**ಸಮಯ ಮರು ನಿಗದಿ:**

ರೈಲು ಸಂಖ್ಯೆ 06274 ಅರಸೀಕೆರೆ-ಕೆಎಸ್‌ಆರ್ ಬೆಂಗಳೂರು ಡೈಲಿ ಪ್ಯಾಸೆಂಜರ್ ಸ್ಪೆಷಲ್ ರೈಲು ಆಗಸ್ಟ್ 27, ಸೆಪ್ಟೆಂಬರ್ 3, 10, 17, 24, ಅಕ್ಟೋಬರ್ 1 ಮತ್ತು 15, 2024 ರಂದು ಅರಸೀಕೆರೆ ನಿಲ್ದಾಣದಿಂದ 155 ನಿಮಿಷ ತಡವಾಗಿ ಪ್ರಯಾಣ ಹೊರಡಲಿದೆ.

**ರೈಲುಗಳ ನಿಯಂತ್ರಣ:**

ಆಗಸ್ಟ್ 31, ಸೆಪ್ಟೆಂಬರ್ 21, 28, ಅಕ್ಟೋಬರ್ 5 ಮತ್ತು 12, 2024 ರಂದು ಪ್ರಾರಂಭವಾಗುವ ರೈಲು ಸಂಖ್ಯೆ 16545 ಯಶವಂತಪುರ-ಸಿಂಧನೂರು ಡೈಲಿ ಪ್ಯಾಸೆಂಜರ್ ಸ್ಪೆಷಲ್ ರೈಲು ಮಾರ್ಗ ಮಧ್ಯ 30 ನಿಮಿಷಗಳವರೆಗೆ ನಿಯಂತ್ರಿಸಲಾಗುತ್ತದೆ.

ಆಗಸ್ಟ್ 31, ಸೆಪ್ಟೆಂಬರ್ 21, 28, ಅಕ್ಟೋಬರ್ 5 ಮತ್ತು 12, 2024 ರಂದು ಪ್ರಾರಂಭವಾಗುವ ರೈಲು ಸಂಖ್ಯೆ 20653 ಕೆಎಸ್‌ಆರ್ ಬೆಂಗಳೂರು-ಬೆಳಗಾವಿ ಎಕ್ಸ್‌ಪ್ರೆಸ್ ರೈಲನ್ನು ಮಾರ್ಗ ಮಧ್ಯ 20 ನಿಮಿಷಗಳವರೆಗೆ ನಿಯಂತ್ರಿಸಲಾಗುತ್ತದೆ.

**ಸೋಲಾಪುರ-ಹುಬ್ಬಳ್ಳಿ ಪ್ಯಾಸೆಂಜರ್ :**

ಆಗಸ್ಟ್ 20 ಮತ್ತು 22, 2024 ರಂದು ಸೋಲಾಪುರದಿಂದ ಪ್ರಯಾಣ ಬೆಳೆಸುವ ರೈಲು ಸಂಖ್ಯೆ 07331 ಸೋಲಾಪುರ-ಎಸ್‌ಎಸ್‌ಎಸ್ ಹುಬ್ಬಳ್ಳಿ ಡೈಲಿ ಪ್ಯಾಸೆಂಜರ್ ಸ್ಪೆಷಲ್ ರೈಲು ಕುಸುಗಲ್ ಮತ್ತು ಹೆಬಸೂರ ನಿಲ್ದಾಣಗಳ ನಡುವೆ ಹಳಿ ಕಾಮಗಾರಿ ನಿಮಿತ್ತ 60 ನಿಮಿಷ ಮಾರ್ಗ ಮಧ್ಯೆ ನಿಯಂತ್ರಿಸಲಾಗುತ್ತಿದೆ.

**- ಡಾ. ಮಂಜುನಾಥ ಕನಮಡಿ,**
ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ,
ನೈರುತ್ಯ ರೈಲ್ವೆ, ಹುಬ್ಬಳ್ಳಿ.

# ಸಿದ್ದರಾಮಯ್ಯ ತನಿಖೆ: ಪರ-ವಿರುದ್ಧ ಪ್ರತಿಭಟನೆ

**(1ನೇ ಪುಟದಿಂದ)** ವಿರೋಧಿ ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿ ಎಂದು ಒತ್ತಾಯ ಮಾಡಿದರು.

ಕೇಂದ್ರದ ಕೈಗೊಂಬೆಯಂತೆ ವರ್ತಿಸುತ್ತಿರುವ ಈ ರಾಜ್ಯಪಾಲರು ನಮಗೆ ಬೇಕಿಲ್ಲ, ಏನೂ ತಪ್ಪು ಮಾಡದ ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಆದೇಶಿಸಿರುವುದು ಎಷ್ಟರ ಮಟ್ಟಿಗೆ ಸರಿ. ತಮ್ಮ ವಿರುದ್ಧ ದೂರು ಬಂದಾಕ್ಷಣ ನ್ಯಾಯಾಂಗ ತನಿಖೆಗೆ ಮುಖ್ಯಮಂತ್ರಿ ಅವರು ಆದೇಶ ಮಾಡಿದ್ದಾರೆ, ಇದರ ನಡುವೆ ಮೈಸೂರು ಲೋಕಾಯುಕ್ತದಲ್ಲೂ ತನಿಖೆ ನಡೆಯುತ್ತಿದೆ. ಇಷ್ಟೆಲ್ಲಾ ಇದ್ದರೂ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಬೇಕೆಂಬ ಏಕೈಕ ಉದ್ದೇಶದಿಂದ ಮುಖ್ಯಮಂತ್ರಿ ಅವರ ವಿರುದ್ಧ ತನಿಖೆಗೆ ಆದೇಶ ಮಾಡಿದ್ದಾರೆ ಎಂದು ಆರೋಪಿಸಿದರು.

ಇವರ ಷಡ್ಯಂತ್ರಕ್ಕೆ ನಾವು ಬಗ್ಗುವುದಿಲ್ಲ, ಕೇಂದ್ರ ಸರ್ಕಾರದ ಸವಾಲನ್ನು ಎದುರಿಸುತ್ತೇವೆ ಎಂದು ಹೇಳಿದ್ದಲ್ಲದೆ, ರಾಜ್ಯಪಾಲರು ಮತ್ತು ಎನ್‌ಡಿಎ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಮತ್ತೊಂದೆಡೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಪ್ರತಿಭಟನೆ ನಡೆದು, ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವಿಜಯೇಂದ್ರ ಮಾತನಾಡಿ, ಬಿಜೆಪಿ-ಜೆಡಿಎಸ್ ಒಂದಾಗಿ ರಾಜ್ಯದಲ್ಲಿನ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತಿವೆ, ಹೋರಾಟ ತಾರ್ಕಿಕ ಅಂತ್ಯಕ್ಕೆ ಬಂದಿದೆ, ಮುಖ್ಯ ಮಂತ್ರಿ ವಿರುದ್ಧ ಅನೇಕ ಭ್ರಷ್ಟಾಚಾರ ಹಗರಣದ ಆರೋಪಗಳು ಕೇಳಿ ಬಂದಿವೆ ಎಂದರು.

ಮುಖ್ಯಮಂತ್ರಿ ವಿರುದ್ಧ ಸಾಕಷ್ಟು ದಾಖಲೆಗಳನ್ನು ಸಲ್ಲಿಸಿದ ನಂತರವೇ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ಸಿದ್ದರಾಮಯ್ಯ ರಾಜೀನಾಮೆ ಕೊಡದೆ, ಬೆಂಬಲಿಗರು ಹಾಗೂ ಹೈಕಮಾಂಡ್ ಜೊತೆ ಸೇರಿ ಗೂಂಡಾಗಿರಿ ಮಾಡುತ್ತಿದ್ದಾರೆ. ರಾಜ್ಯಪಾಲರ ಮೇಲೆ ದಬ್ಬಾಳಿಕೆ ಮಾಡುವುದನ್ನು ಬಿಟ್ಟು, ಮುಖ್ಯಮಂತ್ರಿ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕು, ತಮ್ಮ ಬೆಂಬಲಕ್ಕೆ ಸಚಿವರು, ಶಾಸಕರು ನಿಲ್ಲುತ್ತಾರೆ ಎಂಬ ಭಂಡತನ ಬಿಟ್ಟು ರಾಜೀನಾಮೆ ಕೊಡಿ ಎಂದು ಒತ್ತಾಯಿಸಿದರು.

ಸಿದ್ದರಾಮಯ್ಯ ನ್ಯಾಯಾಲಯದಲ್ಲಿ ಹೋರಾಟ ಮಾಡಲಿ, ಬೇಡ ಎನ್ನುವುದಿಲ್ಲ. ಕಾನೂನಾತ್ಮಕವಾಗಿ ಏನೇ ಹೋರಾಟ ಮಾಡಿ. ಆದರೆ, ಮೊದಲು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಿ, ನಿಮ್ಮ ಸಾಮಾಜಿಕ ನ್ಯಾಯದ ಮುಖವಾಡ ಕಳಚಿರುವುದನ್ನು ರಾಜ್ಯದ ಜನ ನೋಡುತ್ತಿದ್ದಾರೆ ಎಂದರು.

ವಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಎಷ್ಟು ಲೂಟಿ ಆಗುತ್ತಿದೆ ಎಂಬುದಾಗಿ ಜನ ಕೇಳುತ್ತಿದ್ದಾರೆ. ಸದನದಲ್ಲೂ ಉತ್ತರ ಕೊಡದೆ ಓಡಿಹೋದಿರಿ. ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಹಾಳಾದರೆ ನೀವೇ ನೇರ ಹೊಣೆ, ಮುಡಾ ಹಗರಣ ಸಂಬಂಧ ಮಾಧ್ಯಮಗಳಲ್ಲಿ ದಾಖಲೆಗಳ ಪ್ರದರ್ಶನ ಆಗುತ್ತಿದೆ ಎಂದು ಹೇಳಿದರು.

ಪ್ರಾಸಿಕ್ಯೂಷನ್ ಅನುಮತಿ ಕೇಳಿರೋದು ಒಬ್ಬ ಟಿ.ಜೆ.ಅಬ್ರಹಾಂ, ಸ್ನೇಹಮಯಿ ಕೃಷ್ಣಾ, ಪ್ರದೀಪ್ ಅವರುಗಳು. ಕಾಗೆ ಬೆಳ್ಳಗಿದೆಯಾ, ಕಪ್ಪಗಿದೆಯಾ ಎಂದು ತೀರ್ಮಾನ ಮಾಡುವುದು ಬಿಜೆಪಿ ಅಲ್ಲ. ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಕೊಟ್ಟಾಗ ಹಬ್ಬ ಮಾಡಿದ್ದಿರಿ, ಈಗ ಗಲಾಟೆ ಮಾಡುತ್ತಿದ್ದೀರಾ? ಎಂದು ಪ್ರಶ್ನಿಸಿದರು.

ಒಂದೇ ಸರ್ಕಾರ, ಒಂದೇ ಮಂತ್ರಿಮಂಡಲ, ಒಂದೇ ಕ್ಯಾಬಿನೆಟ್, ಎರಡು ನೀತಿ, ದ್ವಂದ್ವ ಏಕೆ? ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ಒಂದು ಕಾನೂನು, ಸಿದ್ದರಾಮಯ್ಯ ಅವರಿಗೆ ಒಂದು ಕಾನೂನಾ? ಎಂದು ಪ್ರಶ್ನಿಸಿದರು.

# ಸ್ವಾಮೀಜಿ ಶಿಷ್ಯರೆಂದು ಹೇಳಿ ವಂಚನೆ



**(1ನೇ ಪುಟದಿಂದ)** ಹನುಮಂತಪ್ಪ, ಅರ್ಜುನ ರಾಯಲ್, ಅನಿಲ್ ಕುಮಾರ್ ನಾಯ್ಕ, ರಿಜ್ವಾನ್ ನಾಸೂರ್, ಗಂಗಾಧರ, ಪ್ರಸನ್ನಕಾಂತ, ಸುರೇಶ, ಅರ್ಜುನ್ ನಂದ್ಯಾಲ, ಮಹೇಂದ್ರ, ನಾಗರಾಜ, ಸಿದ್ದಪ್ಪ, ಮುರುಳಿ ಹಾಗು ಜಿಲ್ಲಾ ಪೊಲೀಸ್ ಕಛೇರಿಯ ಸಿಬ್ಬಂದಿಯವರಾದ ರಾಘವೇಂದ್ರ, ಶಾಂತರಾಜ್ ಒಳಗೊಂಡ ತಂಡವು ಪತ್ತೆ ಕಾರ್ಯ ನಡೆಸಿ ಆರೋಪಿಗಳನ್ನು ಬಂಧಿಸಿದೆ.

# ಇಟ್ಟಿಗೆ ಭಟ್ಟಿಗಳಿಗೆ ಸೌರಶಕ್ತಿ ಬಳಕೆ

**(1ನೇ ಪುಟದಿಂದ)** ಇಟ್ಟಿಗೆ ಭಟ್ಟಿಗಳಿವೆ ಎಂದು ಅಂದಾಜಿಸಲಾಗಿದೆ. ಇವುಗಳು 15 ದಶಲಕ್ಷ ಕಾರ್ಮಿಕರಿಗೆ ಉದ್ಯೋಗ ಕೊಡುತ್ತಿವೆ ಹಾಗೂ ಪ್ರತಿ ವರ್ಷ 35 ದಶಲಕ್ಷ ಟನ್ ಕಲ್ಲಿದ್ದಲು ಬಳಸುತ್ತಿವೆ ಎಂದು ಅಂದಾಜಿಸಲಾಗಿದೆ.

ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಇಟ್ಟಿಗೆ ಭಟ್ಟಿಗಳಷ್ಟೇ ಅಲ್ಲದೆ ಕಾರ್ಮಿಕರು ಸಹ ಸಣ್ಣ ಸೌರ ಫಲಕಗಳ ಬಳಕೆ ಮಾಡುತ್ತಿದ್ದಾರೆ. 40 ವ್ಯಾಟ್ ಸೌರ ಫಲಕದ ವೆಚ್ಚ 1,700 ರೂ. ಆಗುತ್ತದೆ. ಆದರೆ ಇದರಿಂದ ಗುಡಿಸಲಿಗೆ ಅಗತ್ಯವಾದಷ್ಟು ವಿದ್ಯುತ್ ಪಡೆಯಲು ಸಾಧ್ಯವಾಗುತ್ತದೆ ಎಂದು ಕಾರ್ಮಿಕ ಸೋನು ಸಿಂಗ್ ಹೇಳಿದ್ದಾರೆ.

## ಸವಿತಾ ಸಮಾಜದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ,ಆ.19- ಸವಿತಾ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕ ದಿಂದ 2023-24 ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ. 60 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ನಾಳೆ ದಿನಾಂಕ 20 ಕೊನೆ ದಿನ. ಸಂಪರ್ಕಿಸಿ : ಮೊ. 6361639612, 9964931098.

## ಮಾನ್ಯ ಗೌರವಾನ್ವಿತ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದಾವಣಗೆರೆ

**ಅಸಲು ದಾವೆ ಸಂಖ್ಯೆ : 531//2023**

**ವಾದಿಯರು** : 1. ಶ್ರೀಮತಿ ಪೀಕಿಬಾಯಿ ಕೋಂ ಲೇಟ್ ಸತ್ಯನಾಯ್ಕ, 2. ಶ್ರೀಮತಿ ಸುಶೀಲಾ ಬಾಯಿ ಕೋಂ ಲೇಟ್ ಲಿಂಗಾನಾಯ್ಕ, 3. ಶ್ರೀ ಕೃಷ್ಣನಾಯ್ಕ ಬಿನ್ ಲೇಟ್ ಲಿಂಗಾನಾಯ್ಕ, 4. ಶ್ರೀಮತಿ ಗಂಗಾ ಬಾಯಿ ಕೋಂ. ಕೋಟ್ಯಪ್ಪ ಚವ್ಹಾಣ್, 5. ಶ್ರೀಮತಿ ಸುಮಿತ್ರ ಬಾಯಿ ಕೋಂ. ಅರುಣ್ ಕುಮಾರ, 6. ಕು. ಮಂಜುನಾಥ ನಾಯ್ಕ ಬಿನ್ ಲೇಟ್ ಲಿಂಗನಾಯ್ಕ,

**- ವಿರುದ್ಧ**

**ಪ್ರತಿವಾದಿಯರು**: 1. ಶ್ರೀ ಬೆಳ್ಳೂಡಿ ಮುರಿಗೇಂದ್ರಪ್ಪ ಬಿನ್ ವೀರಭದ್ರಪ್ಪ ವಸಂತ ಟಾಕೀಸ್, ದಾವಣಗೆರೆ 2. ಮಾನ್ಯ ತಹಶೀಲ್ದಾರರು, ರೈತರ ಭವನ, ಹೊಸ ಬಸ್ ನಿಲ್ದಾಣದ ಎದುರು. ಪಿ.ಬಿ ರಸ್ತೆ, ದಾವಣಗೆರೆ,

**1ನೇ ಪ್ರತಿವಾದಿಗೆ ನೀಡಲಾದ ಪ್ರಕಟಣಾ ನೋಟೀಸ್**

ಈ ಮೇಲ್ಕಂಡ ದಾವೆಯ ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಘೋಷಣಾತ್ಮಕ ಡಿಕ್ರಿ ಮತ್ತು ನಿರ್ದೇಶನಾತ್ಮಕ ನಿರ್ಬಂಧಕಾಜ್ಞೆ ಡಿಕ್ರಿ ಹಾಗೂ ಇತರೆ ಪರಿಹಾರ ಕೋರಿ ಈ ಮೇಲ್ಕಂಡ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ 1ನೇ ಪ್ರತಿವಾದಿಗೆ ನ್ಯಾಯಾಲಯದಿಂದ ನೀಡಲಾದ ಸಮನ್ಸ್ ಜಾರಿಯಾಗದೇ ಇದ್ದುದರಿಂದ ವಾದಿಯರು 1ನೇ ಪ್ರತಿವಾದಿಗೆ ಪತ್ರಿಕಾ ಪ್ರಕಟಣೆಯ ಮೂಲಕ ಈ ಸಮನ್ಸ್‌ನ್ನು ಹೊರಡಿಸಿದ್ದು, 1ನೇ ಪ್ರತಿವಾದಿಯು ಖುದ್ದಾಗಿ ಅಥವಾ ವಕೀಲರ ಮೂಲಕ ದಿನಾಂಕ: 13.9.2024ರ ಬೆಳಿಗ್ಗೆ 11-00 ಗಂಟೆಗೆ ತಾವಾಗಲೀ ಅಥವಾ ತಮ್ಮ ಪರ ವಕೀಲರಾಗಲೀ ಘನ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದೆಂದು 1ನೇ ಪ್ರತಿವಾದಿಗೆ ಈ ಪ್ರಕಟಣೆ ಮೂಲಕ ಮಾನ್ಯ ನ್ಯಾಯಾಲಯವು ಸಮನ್ಸ್‌ನ್ನು ಹೊರಡಿಸಿದ್ದು, ಒಂದು ವೇಳೆ 1ನೇ ಪ್ರತಿವಾದಿಯು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಲು ವಿಫಲವಾದಲ್ಲಿ ಅವರ ವಿರುದ್ಧ ಮಾನ್ಯ ನ್ಯಾಯಾಲಯವು ಏಕಪಕ್ಷೀಯವಾಗಿ ಆದೇಶವನ್ನು ಹೊರಡಿಸುತ್ತದೆ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 19.8.2024 ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಮೇರೆಗೆ ಆದೇಶದ ಮೇರೆಗೆ
**ಶಿರಸ್ತೇದಾರರು**
3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ದಾವಣಗೆರೆ.,
**ಮೊ : 99457 04954**

ಅರ್ಜಿದಾರರ ಪರ ವಕೀಲರು
**ಆರ್. ಗೋಪಾಲ್ ನಾಯ್ಕ**
ದಾವಣಗೆರೆ

## ಎಣ್ಣೆ ಗಾಣದ ಯಶಸ್ವಿ ಉದ್ಯಮಿ ನಳಿನಿ

**(1ನೇ ಪುಟದಿಂದ)** ಕೃಷಿ ಇಲಾಖೆಯು ನೋಡಲ್ ಸಂಸ್ಥೆಯಾಗಿರುವ ಪಿಎಂ - ಎಫ್‌ಎಂಇ ಯೋಜನೆಯ ಮೂಲಕ ಇನ್ನೂ ಎರಡು ಗಾಣದ ಯಂತ್ರಗಳನ್ನು ಅಳವಡಿಸಲು ಸಾಧ್ಯವಾಯಿತು. ಈಗ ಒಟ್ಟು ಐದು ಗಾಣದ ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದವರು ತಿಳಿಸಿದರು.

ಸಾಂಪ್ರದಾಯಿಕ ಪದ್ಧತಿಯ ಹಾಗೂ ಆರೋಗ್ಯಕ್ಕೆ ಹಿತಕರವಾದ ಉತ್ಪನ್ನಗಳನ್ನು ಜನರಿಗೆ ನೀಡಬೇಕು ಎಂಬುದೇ ತಮ್ಮ ಉದ್ದೇಶ. ಹೀಗಾಗಿ ಎಣ್ಣೆಯ ಜೊತೆಗೆ, ಆರೋಗ್ಯಕ್ಕೆ ಹಿತಕರವಾದ ಸಾಂಪ್ರದಾಯಿಕ ಪದ್ಧತಿಯ ಆಹಾರ ವಸ್ತುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುತ್ತಿರುವುದಾಗಿ ಅವರು ಹೇಳಿದ್ದಾರೆ.

ಘಟಕವು ಪರಿಸರ ಸ್ನೇಹಿಯಾಗಿರಬೇಕು ಎಂಬ ಕಾರಣಕ್ಕಾಗಿ, ಸೌರಫಲಕಗಳ ಮೂಲಕ ವಿದ್ಯುತ್ ಪಡೆಯಲು ವ್ಯವಸ್ಥೆ ಮಾಡಿಕೊಂಡಿದ್ದೇನೆ. ಮಳೆಗಾಲದ ದಿನಗಳನ್ನು ಹೊರತು ಪಡಿಸಿದರೆ, ಉಳಿದೆಲ್ಲ ಅವಧಿಯಲ್ಲಿ ಎಣ್ಣೆ ಯಂತ್ರಗಳು ಸೌರಫಲಕದಿಂದ ಕಾರ್ಯ ನಿರ್ವಹಿಸುತ್ತಿವೆ ಎಂದು ನಳಿನಿ ಪೂರ್ಣ ಹೇಳಿದ್ದಾರೆ.

## ಧರ್ಮ ಗಟ್ಟಿಗೊಳಿಸುವ ಅಗತ್ಯವಿದೆ

**(1ನೇ ಪುಟದಿಂದ)** ಶಿಲ್ಪಿಗಳನ್ನು, ಶಿಲಾಮೂರ್ತಿ ಶಿಲ್ಪಿಯನ್ನು ಅಭಿನಂದಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಗ್ರಾಮದ ಮುಖಂಡ ಎಂ.ಜಿ. ಪರಮೇಶ್ವರಗೌಡ, ಸುಮಾರು 1.40 ಕೋಟಿ ರೂ. ವೆಚ್ಚದಲ್ಲಿ ಈ ದೇವಸ್ಥಾನವನ್ನು ನಿರ್ಮಿಸಿದ್ದು, ರುದ್ರಪ್ಪ ಲಮಾಣಿ 15 ಲಕ್ಷ ರೂ., ಜಿ.ಎಂ. ಸಿದ್ದೇಶ್ವರ 13 ಲಕ್ಷ ರೂ., ಹೆಚ್.ಎಸ್. ಶಿವಶಂಕರ್ ಮತ್ತು ಎಸ್. ರಾಮಪ್ಪ ತಲಾ 10 ಲಕ್ಷ ರೂ ಸೇರಿದಂತೆ ಇನ್ನೂ ಅನೇಕ ದಾನಿಗಳು ನೆರವು ನೀಡಿದ್ದಾರೆಂದು ಸ್ಮರಿಸಿದರು.

ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಗ್ರಾಮದ ಶ್ರೀ ಮುರುಗೇಂದ್ರಯ್ಯ ಸ್ವಾಮಿ, ಗ್ರಾ.ಪಂ. ಅಧ್ಯಕ್ಷ ಎನ್.ಜಿ. ಮಂಜನಗೌಡ, ಡಿಸಿಸಿ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಬಿ. ಹಾಲೇಶಪ್ಪ, ಕುಂದೂರು ಮಲ್ಲೇಶಪ್ಪ, ಮಾಳಗಿ ಮಲ್ಲೇಶಪ್ಪ, ಕೆ.ಜಿ. ಸಿದ್ದಪ್ಪ, ಹರಳಹಳ್ಳಿ ಬಸವನಗೌಡ್ರು, ದೇವಸ್ಥಾನ ಕಮಿಟಿ ಅಧ್ಯಕ್ಷ ಕೆ.ಜಿ. ಕೊಟ್ರೇಶ್‌ಗೌಡ, ಉಪಾಧ್ಯಕ್ಷ ಕೆ.ಜಿ. ಮಲ್ಲಿಕಾರ್ಜುನಪ್ಪ, ಕಾರ್ಯದರ್ಶಿ ಕೆ.ಜಿ. ಸದಾಶಿವಪ್ಪ, ಖಜಾಂಚಿ ಕೆ.ಜಿ. ನಾಗರಾಜಪ್ಪ ಸೇರಿದಂತೆ, ಎಲ್ಲಾ ನಿರ್ದೇಶಕರು, ಪೂಜಾರ್ ಗಂಗಾಧರ್, ಕುಂದೂರು ಮಂಜಪ್ಪ, ಕೆ. ಕುಮಾರ್, ನಿವೃತ್ತ ಯೋಧ ಪರಶುರಾಮ್ ಮತ್ತಿತರರು ಭಾಗವಹಿಸಿದ್ದರು.

ಕೆ.ಜಿ. ಕೊಟ್ರೇಶ್‌ಗೌಡ ಸ್ವಾಗತಿಸಿದರು. ಪ್ರವಚನಕಾರ ಬಿ. ಸಿದ್ದೇಶ್ ಕಾರ್ಯಕ್ರಮ ನಿರೂಪಿಸಿದರೆ, ಕೊನೆಯಲ್ಲಿ ಸಾಕ್ಷರತಾ ಸಂಯೋಜಕ ಎಂ. ಶಿವಕುಮಾರ್ ವಂದಿಸಿದರು.

ಈ ವೇಳೆ ದೇವಸ್ಥಾನದ ಶಿಲ್ಪಿ ಎಂ.ಎಂ. ಮಣಿ ತಪದಿ ಮತ್ತು ಮೂರ್ತಿ ಶಿಲ್ಪಿಗಳಾದ ನಾಗೇಂದ್ರಚಾರಿ, ಅರ್ಕಾಚಾರಿ ಅವರನ್ನು ಸನ್ಮಾನಿಸಲಾಯಿತು.

# ವಚನ, ಕಾಯಕ ನಿಷ್ಠೆಯ ಮೂಲಕ ಸಮಾಜ ಸುಧಾರಣೆಗೆ ಅತ್ಯುನ್ನತ ಕೊಡುಗೆ ನೀಡಿದ ನುಲಿಯ ಚಂದ್ರಯ್ಯ



ದಾವಣಗೆರೆ, ಆ. 19 - ವಚನ, ಕಾಯಕ ನಿಷ್ಠೆಯ ಮೂಲಕ ಸಮಾಜ ಸುಧಾರಣೆಗೆ ನುಲಿಯ ಚಂದ್ರಯ್ಯ ಅತ್ಯುನ್ನತ ಕೊಡುಗೆ ನೀಡಿದ್ದಾರೆ ಎಂದು ಉಪವಿಭಾಗಾಧಿಕಾರಿ ಸಂತೋಷ್ ಪಾಟೀಲ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಕೊರಚ, ಕೊರಮ ಸಮಾಜ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ನುಲಿಯ ಚಂದ್ರಯ್ಯ ಜಯಂತಿಯಲ್ಲಿ ಅವರ ಭಾವ ಚಿತ್ರಕ್ಕೆ ಪುಷ್ಪ ನಮನ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

ಬಸವಣ್ಣನ ಕಾರ್ಯಕ್ಷೇತ್ರ ಕಲ್ಯಾಣಕ್ಕೆ ಬಂದು ಕಲ್ಯಾಣದ ಕೆರೆಗಳಲ್ಲಿ ಸಿಗುವ ಹೊಡಕೆ, ಚೇಣಿ ಮುಂತಾದ ನಾರುಗಳಿಂದ ಹಗ್ಗ ಹೊಸೆದು ಮಾರಾಟ ಮಾಡಿ ಬಂದ ಹಣದಿಂದ ಜಂಗಮ ದಾಸೋಹ ನಡೆಸುತ್ತಿದ್ದರು ಎಂದು ತಿಳಿಸಿದರು.

ನುಲಿಯ ಕಾಯಕದಿಂದಾಗಿ ಮುಂದೆ ನುಲಿಯ ಚಂದ್ರಯ್ಯ ನೆಂದು ಹೆಸರಾದವರು ಹಗ್ಗ ಮಾರುವ ಕಾಯಕವನ್ನು ಅತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡುತ್ತಾ ಬಸವಣ್ಣನವರಿಗೆ ಪ್ರಿಯರಾದರು ಎಂದು ತಿಳಿಸಿದರು.

ಮಲೇಬೆನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಕೆ.ಜಿ. ಮಂಜುನಾಥ್ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ನುಲಿಯ ಚಂದ್ರಯ್ಯ ಸಮಾಜದ ಜಿಲ್ಲಾಧ್ಯಕ್ಷ ಮಂಜುನಾಥ, ಜನ ಕ್ರಾಂತಿ ಸಂಪಾದಕ ಕೆ.ಆರ್. ಗಂಗರಾಜು, ಆನಂದಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವೀಂದ್ರ ಹಾಗೂ ಇತರರು ಉಪಸ್ಥಿತರಿದ್ದರು.

# ಹರಿಹರದಲ್ಲಿ ಇಂದು ರಾಘವೇಂದ್ರ ಸ್ವಾಮಿ ಆರಾಧನೆ

ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನದಲ್ಲಿ ರಾಘವೇಂದ್ರ ಸ್ವಾಮಿಗಳ 353ನೇ ಆರಾಧನಾ ಮಹೋತ್ಸವವು ಇಂದಿನಿಂದ ಮೂರು ದಿನ ನಡೆಯಲಿದೆ.

ಇಂದು ಬೆಳಗ್ಗೆ 7ಕ್ಕೆ ಅಷ್ಟೋತ್ತರ ಪಂಚಾಮೃತ ಹಾಗೂ ಅಲಂಕಾರ ಸೇವೆ. 9ರಿಂದ ಪ್ರವಚನ, ಮಂಗಳ ಕಾರ್ಯಕ್ರಮ, 10ಕ್ಕೆ ಸಂಗೀತ ಕಾರ್ಯಕ್ರಮ ನಡೆಯಲಿವೆ.



ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 1 ಗಂಟೆಗೆ ಮಹಾ ಪ್ರಸಾದ ಹಾಗೂ ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ರಾತ್ರಿ 8ಕ್ಕೆ ಮಹಾಮಂಗಳಾರತಿ ಹಾಗೂ ಪ್ರಸಾದ ವಿತರಣೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿಯ ಅಧ್ಯಕ್ಷ ಎ.ಬಿ. ಬಸವರಾಜ್, ಕಾರ್ಯದರ್ಶಿ ಸುಕುಮಾರ್ , ಖಜಾಂಚಿ ಎಸ್. ರಂಗನಾಥ್ ತಿಳಿಸಿದ್ದಾರೆ.

# ಆಧುನಿಕತೆಗೆ ತಕ್ಕಂತೆ ವೃತ್ತಿ ಕೌಶಲ್ಯತೆ ಹೆಚ್ಚಿಸಿಕೊಳ್ಳಬೇಕು

ದಾವಣಗೆರೆ, ಆ. 19- ಆಧುನಿಕತೆಯ ನಾಗಾಲೋಟದಲ್ಲಿ ಛಾಯಾಗ್ರಹಣ ಕ್ಷೇತ್ರವೂ ಸಹ ಬದಲಾಗುತ್ತಿದ್ದು, ಅದಕ್ಕನುಗುಣವಾಗಿ ಛಾಯಾಗ್ರಾಹಕರು, ವಿಡಿಯೋಗ್ರಾಫರ್‌ಗಳು ಆಧುನಿಕ ಕೌಶಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ಕಣ್ವಕುಪ್ಪೆ ಗವಿಮಠದ ಡಾ. ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಕಿವಿಮಾತು ಹೇಳಿದರು.



**ವಿಶ್ವ ಛಾಯಾಗ್ರಹಣ ದಿನಾಚರಣೆ ಕಾರ್ಯಕ್ರಮದಲ್ಲಿ ಕಣ್ವಕುಪ್ಪೆ ಗವಿಮಠದ ಡಾ. ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಕಿವಿಮಾತು**

ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ ಹಿರೇಮಠದ ಸಭಾಂಗಣದಲ್ಲಿ ದಾವಣಗೆರೆ ತಾಲ್ಲೂಕು ಫೋಟೋ ಮತ್ತು ವಿಡಿಯೋ ಗ್ರಾಫರ್ಸ್ ಸಂಘದ 12 ನೇ ವಾರ್ಷಿಕೋತ್ಸವ ಹಾಗೂ 184 ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಅಂಗವಾಗಿ ಛಾಯಾಗ್ರಾಹಕರಿಗೆ ಹಾಗೂ ವೃತ್ತಿ ಬಾಂಧವರಿಗೆ , ಸಾಧಕರಿಗೆ ಸನ್ಮಾನ, ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ, ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

25 ವರ್ಷಗಳ ಹಿಂದೆ ಇದ್ದಂತಹ ಛಾಯಾಗ್ರಹಣ ಕ್ಷೇತ್ರದ ಕಾಲವೇ ಬೇರೆ. ಈಗಿನ ಪರಿಸ್ಥಿತಿಯೇ ಬೇರೆಯಾಗಿದೆ. ಹಿಂದೆ ದವಸ-ಧಾನ್ಯಗಳ, ವಿದ್ಯೆ, ಸಂಪರ್ಕ, ಹಣದ ಕೊರತೆ ಇದ್ದರೂ ಶಾಂತಿ, ನೆಮ್ಮದಿ, ವಿಶ್ವಾಸ ಇತ್ತು. ಆದರೆ ಬದಲಾದ ಕಾಲದಲ್ಲಿ ದುಡಿಮೆ, ಹಣ, ವಿದ್ಯೆ, ಸಂಪರ್ಕ ಎಲ್ಲವೂ ಇದ್ದರೂ ವಿಶ್ವಾಸ, ಶಾಂತಿ, ನೆಮ್ಮದಿ, ಸಂಸ್ಕಾರ, ಮೌಲ್ಯಗಳ ಕೊರತೆ ಕಂಡು ಬರುತ್ತಿದೆ ಎಂದರು.

ದೇವರು ಮನಸ್ಸು ಮಾಡಿದರೆ ಯಾರೂ ನಿರೀಕ್ಷೆ ಮಾಡದಷ್ಟು ಒಳ್ಳೆಯದನ್ನು ಕೊಡುತ್ತಾನೆ. ಅದೇ ದೇವರು ಕ್ರೋಧಿತನಾದರೆ ಕೊಟ್ಟಿದ್ದನ್ನಷ್ಟೇ ಅಲ್ಲದೇ ಚರ್ಮವನ್ನು ಬಿಡದಂತೆ ಕಸಿಯುತ್ತಾನೆ. ಹಾಗಾಗಿ ಕ್ಷಣಿಕ ಸುಖಕ್ಕಾಗಿ ದುಶ್ಚಟಗಳಿಗೆ ಬಲಿಯಾಗದೇ, ಆಸೆ, ಆಮಿಷ, ಸ್ವಾರ್ಥಕ್ಕೆ ಒಳಗಾಗದೇ ಆದರ್ಶಮಯ, ಮೌಲ್ಯಯುತ, ಪರೋಪಕಾರಿ ಜೀವನ ನಮ್ಮದಾಗಿಸಿಕೊಳ್ಳೋಣ ಎಂದು ಹಿತ ನುಡಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಛಾಯಾಗ್ರಾಹಕರ ಅಕಾಡೆಮಿ ಮಾಡುವ ಬೇಡಿಕೆ ಸೇರಿದಂತೆ ನ್ಯಾಯಸಮ್ಮತ ಬೇಡಿಕೆಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಹಾಗೂ ಕಾರ್ಮಿಕ ಇಲಾಖೆ ಸವಲತ್ತುಗಳನ್ನು ಕೊಡಿಸುವ ಬಗ್ಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರೊಂದಿಗೆ, ಸಾಧ್ಯವಾದರೆ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಲು ನಾನು ಬದ್ದನಿದ್ದೇನೆ ಎಂದು ಹೇಳಿದರು.

ಬೆಂಗಳೂರಿನ ಅನುಷ್ಠಾನ ಫೌಂಡೇಶನ್ ಮುಖ್ಯಸ್ಥರಾದ ಎಸ್.ಟಿ. ಸುಷ್ಮಾ ಮಾತನಾಡಿ, ಎಲ್ಲಾ ನೋವುಗಳನ್ನು ನುಂಗಿಕೊಂಡು 'ಸ್ಮೈಲ್ ಪ್ಲೀಸ್' ಎನ್ನುತ್ತಾ ಎಲ್ಲರನ್ನು ನಗಿಸಿ, ಛಾಯಾಚಿತ್ರ ತೆಗೆದುಕೊಡುವ ಛಾಯಾಗ್ರಾಹಕರ ವೃತ್ತಿ ವಿಶೇಷವಾದುದು. ಪ್ರತಿಯೊಬ್ಬರ ಬಾಳಿನ ನೆನಪಿನ ಬುತ್ತಿಯನ್ನು ಕಟ್ಟಿಕೊಡುವ ಛಾಯಾಗ್ರಾಹಕರು ಸಾಕಷ್ಟು ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಸರ್ಕಾರದಿಂದ ಅಗತ್ಯ ಸೌಲಭ್ಯಗಳನ್ನು ನೀಡಲು ಮುಂದೆಬರಬೇಕಾಗಿದೆ. ಆಶ್ರಯ ಕಲ್ಪಿಸುವ ಜೊತೆ ವೃತ್ತಿಗೆ ಪೂರಕವಾದ ಪರಿಕರಗಳನ್ನು ಖರೀದಿಸಲು ಸಹಾಯ ಹಸ್ತ ಚಾಚಬೇಕಾಗಿದೆ ಎಂದು ಹೇಳಿದರು.

ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್ ಮಾತನಾಡಿ, ಛಾಯಾಗ್ರಾಹಕರು, ವಿಡಿಯೋಗ್ರಾಫರ್ ಹಾಗೂ ಮಾಧ್ಯಮ ಕ್ಷೇತ್ರ ಒಂದಕ್ಕೊಂದು ಪೂರಕವಾದವುಗಳು. ಯಾವುದೇ ಸಭೆ, ಸಮಾರಂಭ ಸೇರಿದಂತೆ ಇತರೆ ಎಲ್ಲಾ ಕಾರ್ಯಗಳಲ್ಲೂ ಛಾಯಾಗ್ರಾಹಕರ ಮತ್ತು ವಿಡಿಯೋಗ್ರಾಫರ್ ಪಾತ್ರ ಮಹತ್ವವಾದುದು ಎಂದರು.

ಸಂಘದ ಅಧ್ಯಕ್ಷ ದೇವನಗರಿ ಎಂ. ಮನು ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಮರ ಸೇನೆ ರಾಜ್ಯಾಧ್ಯಕ್ಷ ಎಂ.ಎಸ್. ಸಿದ್ದೇಶ್ ಕೋಟ್ಯಾಳ್, ಬಿಜೆಪಿ ಎಸ್ಟಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಗುಮ್ಮನೂರು ಶ್ರೀನಿವಾಸ್ ಮಾತನಾಡಿದರು.

ಸಂಘದ ಪದಾಧಿಕಾರಿಗಳಾದ ಎನ್. ಶ್ರವಣಕುಮಾರ್, ಮುದ್ದಳ್ಳಿ ಅರುಣ್, ಬಿ. ಮಂಜುನಾಥ್, ಎಸ್. ರಾಜಶೇಖರ ಕೊಂಡಜ್ಜಿ, ಬೆಂಗಳೂರಿನ ಪ್ರಶಾಂತ್, ಹೊಸಪೇಟೆ ಖಾಜಾಪೀರ್, ಡಿ. ರಮೇಶ, ಸಂತೋಷ್ ದೊಡ್ಮನಿ, ಹೆಚ್.ಎಸ್. ಸಂಜಯ್, ಕೆ. ದೇವೇಂದ್ರಪ್ಪ, ಕೆ.ಎಂ. ವೆಂಕಟೇಶ್, ವಿಜಯಕುಮಾರ್ ಮುಧೋಳ್, ಡಿ. ರಂಗನಾಥ್, ಎನ್.ಕೆ. ಕೊಟ್ರೇಶ್ ಸೇರಿದಂತೆ ಅನೇಕರಿದ್ದರು.

# ನಗರದಲ್ಲಿ ಇಂದು ಡಿ. ದೇವರಾಜ ಅರಸು ಜನ್ಮ ದಿನಾಚರಣೆ

ಜಿಲ್ಲಾಡಳಿತದಿಂದ ಹಿಂದುಳಿದ ವರ್ಗಗಳ ನಾಯಕ, ಸಾಮಾಜಿಕ ಹರಿಕಾರ ಡಿ. ದೇವರಾಜ ಅರಸುರವರ 109ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30ಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳು : ಡಾ. ಪ್ರಭಾ ಮಲ್ಲಿಕಾರ್ಜುನ್, ಕೆ. ಎಸ್. ಬಸವಂತಪ್ಪ, ವಿನಾಯಕ ಬಿ.ಹೆಚ್, ಕೆ. ಅಬ್ದುಲ್ ಜಬ್ಬಾರ್, ಕೆ. ದಿನೇಶ್ ಶೆಟ್ಟಿ, ಜಿ.ಎಂ. ಗಂಗಾಧರಸ್ವಾಮಿ, ಉಮಾ ಪ್ರಶಾಂತ್, ಸುರೇಶ್ ಬಿ. ಇಟ್ನಾಳ್ ಮತ್ತು ಇತರರು.

## ಸ್ಪರ್ಶ್ ಫೌಂಡೇಶನ್‌ನಿಂದ ನಿವೃತ್ತ ಶಿಕ್ಷಕರಿಗೆ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆ

ದಾವಣಗೆರೆ, ಆ.19 - ಬೆಂಗಳೂರಿನ ಸ್ಪರ್ಶ್ ಗ್ರೂಪ್ ಆಸ್ಪತ್ರೆಯ ದತ್ತಿ ವಿಭಾಗದ ಸ್ಪರ್ಶ್‌ಫೌಂಡೇಶನ್ ನಿವೃತ್ತ ಶಿಕ್ಷಕರಿಗೆ ಉಚಿತ ಕೀಲು ಬದಲಾವಣೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಿದೆ. ಸ್ಪರ್ಶ್ ಅವರ ಈ ಉಪಕ್ರಮವು 'ಗುರು ನಮನ' ಕಾರ್ಯಕ್ರಮದ ಒಂದು ಭಾಗವಾಗಿದೆ. ಇದು ಗ್ರಾಮೀಣ ಹಿನ್ನೆಲೆಯ ನಿವೃತ್ತ ಶಿಕ್ಷಕರಿಗೆ ಕೀಲು ಬದಲಿ ಶಸ್ತ್ರ ಚಿಕಿತ್ಸೆಗಳನ್ನು ಉಚಿತವಾಗಿ ಒದಗಿಸುವ ಗುರಿಯನ್ನು ಹೊಂದಿದೆ.

ಇದೇ ದಿನಾಂಕ 22ರಂದು ನಗರದ ಮೋದಿ ಕಾಂಪೌಂಡ್ ನಲ್ಲಿರುವ ಎಸ್.ಎಸ್. ಸ್ಪೆಷಾಲಿಟಿ ಕ್ಲಿನಿಕ್‌ನಲ್ಲಿ ಈ ಶಿಬಿರ ಏರ್ಪಾಡಾಗಿದೆ. ಸಂಪರ್ಕಿಸಿ : ಶ್ರೀ ನಾಗರಾಜ್, 89424 43944, ಚೇತನ್ ಕುಮಾರ್, 9980033277.

## ಇಂದು ಕಲ್ಯಾಣ ವೃಷ್ಟಿ ಅಭಿಯಾನ

ಶೃಗೇರಿ ಶಾರದಾ ಪೀಠದಿಂದ ಶ್ರೀ ಮಠದ ಶ್ರೀಶಂಕರ ತತ್ವ ಪ್ರಸಾರ ಅಭಿಯಾನವು ಶ್ರೀ ಶಂಕರಾಚಾರ್ಯರಿಂದ ರಚಿತವಾದ ಕಲ್ಯಾಣ ವೃಷ್ಟಿ ಸ್ತವ, ಶಿವಪಂಚಾಕ್ಷರನ ಕ್ಷತ್ರಮಾಲಾಸ್ತೋತ್ರ ಮತ್ತು ಲಕ್ಷ್ಮಿನರಸಿಂಹಕ ರಾವಲಂಬಸ್ತೋತ್ರ ಈ ಮೂರು ಸ್ತೋತ್ರಗಳ ವಿಶೇಷ ಮಹಾ ಅಭಿಯಾನವನ್ನು ರಾಜ್ಯಾದ್ಯಂತ ಕೈಗೊಂಡಿದ್ದು, ಇಂದು ಬೆಳಿಗ್ಗೆ 11 ಗಂಟೆಗೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ.



# ಮಕ್ಕಳ ಮೇಲೆ ಒತ್ತಡ ಹೇರದಿರಲು ಪೋಷಕರಿಗೆ ಕರೆ

ಹರಪನಹಳ್ಳಿ, ಆ. 19 - ಪ್ರತಿಭಾ ಪುರಸ್ಕಾರ ಮಕ್ಕಳಿಗೆ ಪ್ರೇರಣೆ, ಸ್ಫೂರ್ತಿಯಾಗುವ ಕಾರ್ಯಕ್ರಮ ಎಂದು ಸಿರಿಗೆರೆ ತರಳಬಾಳು ಮಠದ ವಿಶೇಷಾಧಿಕಾರಿ ವೀರಣ್ಣ ಎಸ್. ಜತ್ತಿ ಹೇಳಿದರು.

**ಹರಪನಹಳ್ಳಿ : ಸಾದರ ಲಿಂಗಾಯತ ನೌಕರರ ಬಳಗದ ಕಾರ್ಯಕ್ರಮದಲ್ಲಿ ತರಳಬಾಳು ಮಠದ ವಿಶೇಷಾಧಿಕಾರಿ ವೀರಣ್ಣ ಎಸ್. ಜತ್ತಿ**

ಪಟ್ಟಣದ ತರಳ ಬಾಳು ಕಲ್ಯಾಣ ಮಂಟಪದಲ್ಲಿ ಸಾದರ ಲಿಂಗಾಯತ ನೌಕರರ ಬಳಗದ ವತಿಯಿಂದ ಸಾದರ ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಮಾಜದ ನಿವೃತ್ತ ನೌಕರರಿಗೆ ಗೌರವ ಸಮರ್ಪಣೆ, ಹಳೆಯ ನೌಕರರ ಸಂಘದ ಪದಾಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳ ಮೇಲೆ ಒತ್ತಡ ಹೇರಬೇಡಿ, ನಿವೃತ್ತ ನೌಕರರು ಸಮಯ ವ್ಯರ್ಥ ಮಾಡದೇ ಶಾಲೆಗಳಿಗೆ ತೆರಳಿ ತಮ್ಮ ಅನುಭವ ಹಾಗೂ ಜ್ಞಾನವನ್ನು ಮಕ್ಕಳಿಗೆ ಧಾರೆ ಎರೆಯಿರಿ ಆರೋಗ್ಯ ಚೆನ್ನಾಗಿ ಇರುತ್ತದೆ.

ಪ್ರತಿ ವರ್ಷ ನಿವೃತ್ತ ನೌಕರರಿಗೆ ಸನ್ಮಾನಿಸುವ ವೆಚ್ಚವನ್ನು ನಾನು ಭರಿಸುತ್ತೇನೆ ಎಂದು ವಾಗ್ದಾನ ಮಾಡಿದ ಅವರು, ಇಂತಹ ಕಾರ್ಯಕ್ರಮವನ್ನು ನಿಲ್ಲಿಸಬೇಡಿ ಮುಂದುವರೆಸಿಕೊಂಡು ಹೋಗಿ ಎಂದು ತಿಳಿಸಿದರು.

ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ ಮಾತನಾಡಿ, ಶಿಕ್ಷಣಕ್ಕೆ ಇದ್ದಷ್ಟು ಬೆಲೆ ಯಾವುದಕ್ಕೂ ಇಲ್ಲ, ಉನ್ನತ ಹುದ್ದೆ ಅಲಂಕರಿಸಿದರೆ ಸಮಾಜ ನಿಮ್ಮನ್ನು ಗುರುತಿಸುತ್ತದೆ, ಉತ್ತಮ ಶಿಕ್ಷಣ ಪಡೆಯಿರಿ ಎಂದರು.

ಸಾಧು ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಬಂದೋಳ ಮಂಜುನಾಥ ಉದ್ಘಾಟನೆ ನೆರವೇರಿಸಿ ಮಾತನಾಡಿ, ಗುರುಗಳ ಋಣ ತೀರಿಸಲು ಸಾಧ್ಯವಿಲ್ಲ, ಗೌರವ ಕೊಡಿ. ತಂದೆ-ತಾಯಿಗಳನ್ನು ಚೆನ್ನಾಗಿ ನೋಡಿಕೊಳ್ಳಿ ಎಂದರು.

ನಿವೃತ್ತ ಶಿಕ್ಷಕ ಮೈದೂರು ಎಚ್. ದೇವೇಂದ್ರಗೌಡ ಮಾತನಾಡಿ, ಸಾದರ ಲಿಂಗಾಯತ ನೌಕರರ ಬಳಗದಿಂದ ಸಾದರ ಲಿಂಗಾಯತ ಸಮಾಜದ ವಿದ್ಯಾರ್ಥಿಗಳ ಜೊತೆಗೆ ಮುಂದಿನ ದಿನಗಳಲ್ಲಿ ಅನ್ಯ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ ಎಂದು ಘೋಷಿಸಿದರು.

ಕಾಂಗ್ರೆಸ್ ಮುಖಂಡ ಕಂಬತ್ತಹಳ್ಳಿ ಎಸ್. ಮಂಜುನಾಥ, ಎಂ.ಬಿ.ಯಶವಂತಗೌಡ, ಕೆಂಚನಗೌಡ, ನಿವೃತ್ತ ಶಿಕ್ಷಕ ಕೆ. ಬಸವರಾಜಪ್ಪ, ಶೇಖರಗೌಡ ಪಾಟೀಲ್, ಶಿವಕುಮಾರಗೌಡ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ರಾಮಪ್ಪ ಮಾತನಾಡಿದರು. ಸಾದರ ಲಿಂಗಾಯತ ನೌಕರರ ಬಳಗದ ತಾಲ್ಲೂಕು ಅಧ್ಯಕ್ಷ ಡಾ. ಚೇತನ ಬಣಕಾರ ಅಧ್ಯಕ್ಷತೆ ವಹಿಸಿದ್ದರು.

ಮುಖಂಡ ಉಚ್ಚಂಗಿ ದುರ್ಗದ ಅಂಜಿನಪ್ಪ, ಉದಯಶಂಕರ, ಕೆ.ಬಸವರಾಜ, ಶಿಕ್ಷಕರ ಸಂಘದ ಅಧ್ಯಕ್ಷ ಬಿ. ರಾಜಶೇಖರ, ಶಿಕ್ಷಕರ ಪತ್ತಿನ ಸಂಘದ ಅಧ್ಯಕ್ಷ ಬಿ. ಚಂದ್ರಮೌಳಿ, ಹರಿಯಮ್ಮನಹಳ್ಳಿ ಅಂಜಿನಪ್ಪ, ಸಿದ್ದಲಿಂಗನಗೌಡ, ಜಿ.ಆರ್. ಉಷಾರಾಣಿ, ಕೆ. ಚಂದ್ರಪ್ಪ, ಸಿದ್ದಪ್ಪ ಹರಿಂದ್ರಾಳು, ಬಿಇಓ ಕಚೇರಿ ಅಧೀಕ್ಷಕ ಕರಿಬಸವನಗೌಡ, ತಿಪ್ಪನಾಯನಕನಹಳ್ಳಿ ಅಂಜಿನಪ್ಪ, ಎಚ್. ಕೆಂಚಪ್ಪ, ಆರ್.ಎಸ್. ಸವಿತಾ, ಪಿ. ಮಲ್ಲಿಕಾರ್ಜುನ, ವಿ. ಮಲ್ಲಿಕಾರ್ಜುನ, ಎಂ. ಮಂಜಪ್ಪ, ಎಸ್. ಸಂತೋಷ, ಸಿದ್ದಪ್ಪ ಮಾರೇರ್, ಕೆ.ಜಿ. ಶಿವಕುಮಾರ, ವಿಜಯ ಬಣಕಾರ, ಮುನಿಯಪ್ಪ, ಉಸ್ಮಾನ್, ಜಯಣ್ಣ ಇತರರಿದ್ದರು.

# ಭಾನುವಳ್ಳಿಯ ಶಾಲೆಯಲ್ಲಿ ಸ್ನೇಹ ಸಮ್ಮಿಲನ ಕಾರ್ಯಕ್ರಮ



ಮಲೇಬೆನ್ನೂರು, ಆ. 19 - ಭಾನುವಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ 2004 -2005ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಸಂಘಟಿಸಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಅವಿಸ್ಮರಣೀಯವಾಗಿತ್ತು.

ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯೋಪಾಧ್ಯಾಯರಾದ ಎಸ್.ಸಿ. ದಾನಪ್ಪ, ಬನ್ನಿಕೋಡು ಶಾಲೆಯ ಉಪ ಪ್ರಾಚಾರ್ಯ ವಿ.ಬಿ. ಕೊಟ್ರೇಶಪ್ಪ, ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಉಪಾಧ್ಯಾಯ ಕೆ.ಎನ್. ಸಿದ್ದಪ್ಪ, ವಿಜ್ಞಾನ ಶಿಕ್ಷಕಿ ವಿ. ಭಾರತಿ, ಧೂಳೆಹೊಳೆ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಂ. ಸುರೇಶ್, ನಿವೃತ್ತ ಶಿಕ್ಷಕ ಎನ್. ಮಹೇಶಪ್ಪ, ಕಂಪ್ಯೂಟರ್ ಶಿಕ್ಷಕಿ ನಂದ, ದಾವಣಗೆರೆ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಮ್ಯಾನೇಜರ್ ಸ್ವಾಮಿ, ಕುಂಬಳೂರು ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಿ.ಎಸ್. ವೇದಮೂರ್ತಿ, ಶಿಕ್ಷಕ ದಿ.ನಾಗಪ್ಪನವರ ಧರ್ಮಪತ್ನಿ ಚಿನ್ನಮ್ಮ, ದೇವತಾ ಕೊಟ್ರೇಗೌಡರ ಮಗ ಪ್ರಶಾಂತ್, ಬನ್ನಿಕೋಡು ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಶಾಯಿನಾ ಅವರನ್ನು ಸನ್ಮಾನಿಸಲಾಯಿತು.

ಶಿಕ್ಷಕಿ ಜ್ಯೋತಿ ಸ್ವಾಗತಿಸಿದರು. ಶಿಕ್ಷಕ ಮಂಜುನಾಥ್ ಕಡೇಮನಿ ಕಾರ್ಯಕ್ರಮ ನಿರೂಪಿಸಿದರೆ, ಡಾ. ಯಲ್ಲಪ್ಪ ರೆಡ್ಡಿ ವಂದಿಸಿದರು.

# ದೂಡಾ ಅಧ್ಯಕ್ಷರು, ಸದಸ್ಯರಿಗೆ ಸನ್ಮಾನ



ದಾವಣಗೆರೆ, ಆ.18- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಮಹಾನಗರ ಪಾಲಿಕೆಯ ಉತ್ತರ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಸದಸ್ಯ ಶಾಮನೂರಿನ ಕಣ್ಣಾಳ ಅಂಜಿನಪ್ಪ, ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ, ದೂಡಾ ಸದಸ್ಯ ಮಂಜುನಾಥ್ ಅವರುಗಳನ್ನು ಜಿಲ್ಲಾ ಕುರುಬರ ಸಂಘದ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಇತರರು ಉಪಸ್ಥಿತರಿದ್ದರು.

# ಹರಪನಹಳ್ಳಿ : ಮುಕ್ತಾಯ ಹಂತದ ವಾಲ್ಮೀಕಿ ಸಮುದಾಯ ಭವನದ ಕಾಮಗಾರಿ ಪರಿಶೀಲನೆ

ತಹರಪನಹಳ್ಳಿ, ಆ. 19 - ಪಟ್ಟಣದ ಅರಸಿಕೇರೆ ಬೈಪಾಸ್ ರಸ್ತೆ ಬಳಿ ಮುಕ್ತಾಯ ಹಂತದಲ್ಲಿರುವ ವಾಲ್ಮೀಕಿ ಸಮುದಾಯ ಭವನಕ್ಕೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ವೈ.ಡಿ. ಅಣ್ಣಪ್ಪ ಹಾಗೂ ನಾಯಕ ಸಮಾಜದ ಪದಾಧಿಕಾರಿಗಳು ನಿನ್ನೆ ಭೇಟಿ ನೀಡಿ ಭವನವನ್ನು ಪರಿಶೀಲಿಸಿದರು.

ನಂತರ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹರಪನಹಳ್ಳಿ ತಾಲ್ಲೂಕಿನಲ್ಲಿ ಬಹುದೊಡ್ಡ ಪ್ರಮಾಣದಲ್ಲಿರುವ ನಾಯಕ ಸಮಾಜ ಇದಾಗಿದ್ದು, ಇದಕ್ಕೆ ಇನ್ನು ಹೆಚ್ಚಿನ ಮೂಲ ಸೌಕರ್ಯ ಒದಗಿಸುವಂತೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ ಎಂದರು.



ಈ ಸಂದರ್ಭದಲ್ಲಿ ವಾಲ್ಮೀಕಿ ನಾಯಕ ಸಮಾಜದ ಗೌರವ ಅಧ್ಯಕ್ಷ ಹೆಚ್. ಕೆ. ಹಾಲೇಶ್ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಮಹಿಳಾ ಘಟಕದ ಅಧ್ಯಕ್ಷರಾದ ಎಚ್.ಟಿ. ವನಜಾಕ್ಷಮ್ಮ, ಕಾರ್ಯದರ್ಶಿ ಹೆಚ್.ಕೆ. ಮಂಜುನಾಥ ಉಪಾಧ್ಯಕ್ಷರುಗಳಾದ ಯು. ಸುರೇಶ್ ಮಂಡಕ್ಕಿ, ಉಚ್ಚಂಗಿದುರ್ಗದ ಟಿ. ಮಂಜಪ್ಪ, ತೆಲಗಿ ಅಂಜಿನಪ್ಪ, ನಿಟ್ಟೂರು ಹನುಮಂತಪ್ಪ ಖಜಾಂಚಿ ಬಾಲೇನಹಳ್ಳಿ ರೇವಣಸಿದ್ದಪ್ಪ, ಮುಖಂಡ ಬಾಲೇನಹಳ್ಳಿ ಕೆಂಚನಗೌಡ, ಲಕ್ಷ್ಮಿ ಚಂದ್ರಶೇಖರ್, ಗಿಡ್ಡಳಿ ಡಿ. ನಾಗರಾಜ ಹನುಮಂತಪ್ಪ, ತೆಲಗಿ ಶಿವಪ್ಪ, ಅಂಜಿನಪ್ಪ, ಮಂಜುಳಾ, ಶೋಭಾ, ಮೈದೂರು ಮಾರುತಿ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

# ಬೀಟ್ ವಾಟ್ಸಾಪ್ ಗ್ರೂಪ್‌ಗೆ ಸೇರಿ, ಪೊಲೀಸ್ ಸಿಬ್ಬಂದಿಗೆ ಸ್ಪಂದಿಸಿ



> ಇಂದಿನ ದಿನಗಳಲ್ಲಿ ಸೈಬರ್ ಕ್ರೈಮ್‌ಗಳು ಹೆಚ್ಚು ಸಂಭವಿಸುತ್ತಿದ್ದು, ಅನಾಮಿಕ ಕರೆಗಳು ಹಾಗೂ ಲಿಂಕ್‌ಗಳಿಗೆ ಸ್ಪಂದಿಸಬಾರದು. ಸೈಬರ್ ಕ್ರೈಮ್‌ಗೆ ತುತ್ತಾದಲ್ಲಿ 1930ಕ್ಕೆ ಕರೆ ಮಾಡಿ ಹಾಗೂ ಸ್ಥಳೀಯ ಠಾಣೆಗೆ ದೂರು ನೀಡಬೇಕು.
>
> - ಉಮಾ ಪ್ರಶಾಂತ್., ಎಸ್ಪಿ

ದಾವಣಗೆರೆ, ಆ. 19 - ಸ್ಥಳೀಯರು ಪೊಲೀಸ್ ಬೀಟ್ ವಾಟ್ಸಾಪ್ ಗ್ರೂಪ್‌ಗೆ ಸೇರುವ ಮೂಲಕ ಬೀಟ್ ಪೊಲೀಸ್ ಸಿಬ್ಬಂದಿಗೆ ಸ್ಪಂದಿಸುವಂತೆ ಎಸ್ಪಿ ಉಮಾ ಪ್ರಶಾಂತ್ ಕರೆ ನೀಡಿದರು.

ನಗರ ಉಪವಿಭಾಗದ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣಾ ವ್ಯಾಪ್ತಿಯ ಹೂವಿನ ಮಾರ್ಕೆಟ್‌ನಲ್ಲಿ ನಡೆದ ನಾಗರಿಕ ಜನ ಸಂಪರ್ಕ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಯುವಕರು ಬೀಟ್ ಗ್ರೂಪ್‌ಗಳಲ್ಲಿ ಸೇರ್ಪಡೆಯಾದರೆ ಯಾವ ಸಮಯದಲ್ಲಾದರೂ ಅಧಿಕಾರಿಗಳೊಂದಿಗೆ ಸಂವಹನ ಮಾಡಬಹುದು ಎಂದು ಮಾಹಿತಿ ನೀಡಿದರು.

ನಗರದಲ್ಲಿನ ಮಹಿಳೆಯರ ಸುರಕ್ಷತೆಗಾಗಿ 'ದಾವಣಗೆರೆ ಸುರಕ್ಷಾ ಆ್ಯಪ್' ಇದ್ದು, ಎಲ್ಲ ಮಹಿಳೆಯರು ತಮ್ಮ ಮೊಬೈಲ್‌ಗಳಲ್ಲಿ ಇನ್‌ಸ್ಟಾಲ್ ಮಾಡಿಕೊಂಡು ಅದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಹೇಳಿದರು.

**ಜನ ಸಂಪರ್ಕ ಸಭೆಯಲ್ಲಿ ಎಸ್ಪಿ ಉಮಾ ಪ್ರಶಾಂತ್ ಕರೆ**

ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ್ ಎಂ. ಸಂತೋಷ್ ಮಾತನಾಡಿ, ಅಕ್ರಮ ಚಟುವಟಿಕೆಗಳಲ್ಲಿ ಚಿಕ್ಕ ವಯಸ್ಸಿನ ಮಕ್ಕಳು ಹೆಚ್ಚು ಭಾಗವಹಿಸುತ್ತಿದ್ದಾರೆ.

ಆದ್ದರಿಂದ ಪಾಲಕರು ತಮ್ಮ ಮಕ್ಕಳ ಮೇಲೆ ನಿಗಾವಹಿಸಬೇಕು ಮತ್ತು ಕಾನೂನು ಬಾಹಿರ ಚಟುವಟಿಕೆ ತಡೆಯಲು ನಾಗರಿಕರು ಆರಕ್ಷಕರೊಂದಿಗೆ ಸಹಕರಿಸಬೇಕೆಂದು ಹೇಳಿದರು.

ನಗರದಲ್ಲಿ ಕಳ್ಳತನ ಪ್ರಕರಣ ಹೆಚ್ಚು ಸಂಭವಿಸುತ್ತಿದ್ದು, ಪೊಲೀಸರು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಪಾಲಿಕೆ ಸದಸ್ಯೆ ಮೀನಾಕ್ಷಿ ಜಗದೀಶ್ ತಿಳಿಸಿದರು.

ಇದೇ ವೇಳೆ ಆರ್‌ಎಂಸಿ ಠಾಣಾ ವ್ಯಾಪ್ತಿಯಲ್ಲಿ ಕಳವು, ಸುಲಿಗೆ ಹಾಗೂ ಕಳೆದುಕೊಂಡ ಮೊಬೈಲ್‌ಗಳನ್ನು CEIR ವೆಬ್ ಪೋರ್ಟಲ್ ಮೂಲಕ ಪತ್ತೆ ಹಚ್ಚಿ ವಾರಸುದಾರರಿಗೆ ಹಸ್ತಾಂತರಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಂಜುನಾಥ, ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ, ಆಜಾದ್ ನಗರ ವೃತ್ತ ಸಿಪಿಐ ಬಾಲಚಂದ್ರ ನಾಯ್ಕ್, ಆರ್‌ಎಂಸಿ ಠಾಣೆ ಪಿಎಸ್‌ಐ ಸಚಿನ್ ಬಿರಾದಾರ್, ಗೋಪಿ ನಾಯ್ಕ್, ಕರೇಗೌಡ್ರು ಮತ್ತಿತರರಿದ್ದರು.

# ಹರಿಹರದಲ್ಲಿ ಶ್ರೀ ಮಾರ್ಕಂಡೇಶ್ವರ ಸ್ವಾಮಿಯ ಪಲ್ಲಕ್ಕಿ ಉತ್ಸವ

ಹರಿಹರ, ಆ. 19- ನಗರದ ಶ್ರೀ ಮಾರ್ಕಂಡೇಶ್ವರ ಸ್ವಾಮಿಯ ಪಲ್ಲಕ್ಕಿ ಉತ್ಸವ ಸಡಗರ, ಸಂಭ್ರಮದಿಂದ ಮತ್ತು ಶ್ರದ್ಧಾ ಭಕ್ತಿಯಿಂದ ನಡೆಯಿತು.



ನಗರದ ಮೆಟ್ಟಿಲು ಹೊಳೆ ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ಸ್ವಾಮಿ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆ ಟಿ.ಬಿ. ರಸ್ತೆ, ಹಳೆ.ಪಿ.ಬಿ. ರಸ್ತೆ, ಗಾಂಧಿ ವೃತ್ತ, ಮುಖ್ಯ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ದೇವಸ್ಥಾನ ರಸ್ತೆಯ ಮೂಲಕ ಸಂಚರಿಸಿ ಪುನಃ ದೇವಸ್ಥಾನಕ್ಕೆ ಅಂತ್ಯಗೊಂಡಿತು.

ಮೆರವಣಿಗೆಯಲ್ಲಿ ಡೊಳ್ಳು, ಪುರವಂತರ ವಡಪುಗಳು, ಸಮಾಳ, ಬ್ಯಾಂಡ್ ಸೆಟ್, ಸೇರಿದಂತೆ, ವಿವಿಧ ಕಲಾ ಮೇಳಗಳು ಮೆರವಣಿಗೆಗೆ ಮೆರಗು ನೀಡಿದವು.

## ಹರಿಹರದಲ್ಲಿ 24ಕ್ಕೆ ಕಲ್ಯಾಣೋತ್ಸವ

ಹರಿಹರ, ಆ.19- ನಗರದ ಹೊಸಭರಂಪುರ ಬಡಾವಣೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 24ರ ಶನಿವಾರ ಮಧ್ಯಾಹ್ನ 12.15ಕ್ಕೆ ಶ್ರೀ ಲಕ್ಷ್ಮಿ ವೆಂಕಟೇಶ್ವರ ಕಲ್ಯಾಣೋತ್ಸವ ನಡೆಯಲಿದೆ.



# ಜಿಲ್ಲಾ ಚೀಟಿ ನಿಧಿಗಳ ಸಂಘದ ಸಭೆ



ದಾವಣಗೆರೆ, ಆ. 19 - 42ನೇ ಚೀಟಿ ನಿಧಿಗಳ ದಿನಾಚರಣೆಯ ಅಂಗವಾಗಿ ದಾವಣಗೆರೆ ಜಿಲ್ಲಾ ಚೀಟಿ ನಿಧಿಗಳ ಸಂಘದಿಂದ ನಗರದ ಜೆ.ಪಿ. ಸಭಾಂಗಣದಲ್ಲಿ ಸಾರ್ವಜನಿಕ ಜಾಗೃತಿ ಸಭೆಯು ಇಂದು ನಡೆಯಿತು.

ಜಿಲ್ಲಾ ಚೀಟಿ ನಿಧಿಗಳ ಉಪ ನಿಬಂಧಕ ಮಧು ಶ್ರೀನಿವಾಸ್, ಚೀಟಿ ನಿಧಿಗಳ ಸಹಾಯಕ ನಿಬಂಧಕರಾದ ಶ್ರೀಮತಿ ಮಂಜುಳಾ, ಜಿಲ್ಲಾ ವಕೀಲರ ಸಂಘದ ಸಹ ಕಾರ್ಯದರ್ಶಿ ಮತ್ತು ಸಂಘದ ಕಾನೂನು ಸಲಹೆಗಾರ ಎ.ಎಸ್. ಮಂಜುನಾಥ್, ಸಹಕಾರ ಇಲಾಖೆಯ ಅಧಿಕಾರಿಗಳಾದ ಶ್ರೀಮತಿ ಭಾಗ್ಯಶ್ರಿ ಮತ್ತು ಜಗದೀಶ್ ಅವರುಗಳು ಮುಖ್ಯ ಅತಿಥಿಗಳಾಗಿ ಅಗಮಿಸಿ ಸಾರ್ವಜನಿಕರು ಅಧಿಕೃತ ಚೀಟಿ ನಿಧಿಗಳಲ್ಲಿ ವ್ಯವಹರಿಸಿದಾಗ ಮಾತ್ರ ನಿಮ್ಮ ಹಣಕ್ಕೆ ಭದ್ರತೆ ಇರುತ್ತದೆ, ನೀವು ಪಡೆದುಕೊಳ್ಳುವ ಹಣಕ್ಕೆ ಕಡಿಮೆ ಬಡ್ಡಿ ಬೀಳುತ್ತದೆ ಎಂದು ಕಿವಿ ಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಬಹಳ ವರ್ಷ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಅವರ ಸೇವೆಯನ್ನು ಗುರುತಿಸಿ, ಸನ್ಮಾನಿಸಲಾಯಿತು.

ಜಿಲ್ಲಾ ಚೀಟಿ ನಿಧಿಗಳ ಸಂಘದ ಅಧ್ಯಕ್ಷರಾದ ಭಾಗ್ಯರಂಗ ಚಿಟ್ಸ್‌ನ ರಂಗರಾವ್, ಉಪಾಧ್ಯಕ್ಷರಾದ ನವೋದಯ ಚಿಟ್ ಫಂಡ್‌ನ ಸತ್ಯನಾರಾಯಣ ಮೂರ್ತಿ, ಕಾರ್ಯದರ್ಶಿ ಅಂದನೂರು ಚಿಟ್ಸ್‌ನ ಅಂದನೂರು ರಾಜೇಶ್, ಸಹ ಕಾರ್ಯದರ್ಶಿ ಮಾರುತಿ ಚಿಟ್ಸ್‌ನ ಷಣ್ಮುಖರಾಜು, ಖಜಾಂಚಿ ವಾಸವಾಂಬ ಚಿಟ್ಸ್‌ನ ರೆಡ್ಡಯ್ಯ ಮತ್ತು ನಿರ್ದೇಶಕರುಗಳಾದ ಸ್ಕಂದ ಚಿಟ್ಸ್‌ನ ಲೋಹಿತ್, ಗುರು ರಾಘವೇಂದ್ರ ಚಿಟ್ಸ್ ನ ಪದ್ಮರಾಜ್, ಶ್ರೀನಿವಾಸ ಚಿಟ್ಸ್‌ನ ಅಗಡಿ ಸತೀಶ್, ಕೆಪಿಆರ್ ಶ್ರೀರಕ್ಷಾ ಚಿಟ್ಸ್‌ನ ರವಿ, ಗುರು ಚಿಟ್ಸ್‌ನ ಮಲ್ಲಿಕಾರ್ಜುನ ಸ್ವಾಮಿ, ಕ್ಷೇತ್ರಪಾಲ ಚಿಟ್ಸ್‌ನ ನವೀನ್ ಜೈನ್, ಸಿದ್ದೇಶ್ವರ ಚಿಟ್ಸ್‌ನ ಸಿದ್ದಯ್ಯ ಮತ್ತು ಸಿರಿ ಚಿಟ್ಸ್‌ನ ಶ್ರೀನಿವಾಸ ರೆಡ್ಡಿ ಉಪಸ್ಥಿತರಿದ್ದರು.

## ಸೈನಿಕನಿಗೆ ಚೂರಿ ಇರಿತ, ಬಂಗಾರ ಬಿಟ್ಟು ಕಳ್ಳಸಾಗಣೆದಾರ ಪರಾರಿ

ನಾಡಿಯಾ, ಆ. 19 - 6 ಕೆಜಿ ಬಂಗಾರ ಕಳ್ಳ ಸಾಗಣೆ ಮಾಡುತ್ತಿದ್ದ ವ್ಯಕ್ತಿಯೋರ್ವ ಬಿ.ಎಸ್.ಎಫ್. ಭದ್ರತಾ ಸಿಬ್ಬಂದಿ ಮೇಲೆ ಚೂರಿಯಿಂದ ಹಲ್ಲೆ ನಡೆಸಿದ್ದಾನೆ. ಬಾಂಗ್ಲಾದೇಶದ ಗಡಿಯಲ್ಲಿ ಈ ಘಟನೆ ನಡೆದಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬಿ.ಎಸ್.ಎಫ್.ನ ಸೈನಿಕ ಅಪಾಯದಿಂದ ಪಾರಾಗಿದ್ದಾರೆ. ಕಳ್ಳ ಸಾಗಣೆ ಮಾಡುತ್ತಿದ್ದ ವ್ಯಕ್ತಿ ಬಂಗಾರವನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾನೆ.

22 ಬಂಗಾರದ ಬಿಸ್ಕೆಟ್ ಹಾಗೂ ಎಂಟು ಬಂಗಾರದ ಗಟ್ಟಿಗಳನ್ನು ಸಾಗಣೆ ಮಾಡಲಾಗುತ್ತಿತ್ತು. ಹತ್ತಿರದಲ್ಲೇ ರೈತರು ಕೆಲಸ ಮಾಡುತ್ತಿದ್ದ ಕಾರಣ ಸೈನಿಕ ಗುಂಡು ಹಾರಿಸಿಲ್ಲ. ವಶಪಡಿಸಿಕೊಂಡ ಬಂಗಾರವನ್ನು ಕಂದಾಯ ಗುಪ್ತಚರ ನಿರ್ದೇಶನಾಲಯಕ್ಕೆ ಹಸ್ತಾಂತರಿಸಲಾಗುವುದು ಎಂದು ಬಿ.ಎಸ್.ಎಫ್. ತಿಳಿಸಿದೆ.

# ಸಿಟಿ ಕೋ ಆಪರೇಟಿವ್ ಬ್ಯಾಂಕ್‌ನ 32ನೇ ವಾರ್ಷಿಕ ಮಹಾಸಭೆ

ದಾವಣಗೆರೆ, ಆ. 19- ನಗರದ ಸಿಟಿ ಕೋ-ಆಪರೇಟಿವ್ ಬ್ಯಾಂಕ್‌ನ 32ನೇ ವಾರ್ಷಿಕ ಮಹಾಸಭೆಯು ಸದ್ಯೋಜಾತ ಶಿವಾಚಾರ್ಯರ ಹಿರೇಮಠದಲ್ಲಿ ಕಳೆದ ವಾರ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬ್ಯಾಂಕಿನ ಉಪಾಧ್ಯಕ್ಷ ನಿರಂಜನ ನಿಶಾನಿಮಠ್, ಬ್ಯಾಂಕಿನ 2023-24ನೇ ಸಾಲಿನ ಪಕ್ಷಿನೋಟ ಮಂಡಿಸಿದರು.

ಹಿಂದಿನ ಸಭೆಯ ನಡಾವಳಿಗಳನ್ನು ವ್ಯವಸ್ಥಾಪಕ ಎನ್. ಮಂಜುನಾಥ್, 31.03.2024ರ ಲಾಭ - ನಷ್ಟ ಮತ್ತು ಅಢಾವೆ ಪತ್ರಿಕೆ ನಿವ್ವಳ ಲಾಭವನ್ನು ಹಿರಿಯ ನಿರ್ದೇಶಕ ಬಿ.ಹೆಚ್. ಪರಶುರಾಮಪ್ಪ ಮಂಡಿಸಿದರು.

2023-24ನೇ ಸಾಲಿನ ಹೆಚ್ಚುವರಿಯಾದ ಖರ್ಚುಗಳನ್ನು ಮತ್ತು 2024-25ನೇ ಸಾಲಿನ ಆಯವ್ಯಯವನ್ನು ವೃತ್ತಿಪರ ನಿರ್ದೇಶಕ ಡಾ. ಎಂ. ಸೋಮಶೇಖರಪ್ಪ ಮಂಡಿಸಿದರು.

2024-25ನೇ ಸಾಲಿನ ಆಡಿಟ್ ವರದಿಯನ್ನು ಮತ್ತು ಅನುಪಾಲನಾ ವರದಿಯನ್ನು ವ್ಯವಸ್ಥಾಪಕರು ಹಾಗೂ 2024-25ನೇ ಸಾಲಿನ ಮೂವರು ಲೆಕ್ಕ ಪರಿಶೋಧಕ ಫರ್ಮ್‌ಗಳನ್ನು ಸಭೆಯಲ್ಲಿ ಉಪಾಧ್ಯಕ್ಷ ನಿರಂಜನ್ ನಿಶಾನಿಮಠ್ ಮಂಡಿಸಿ ಸಭೆಯ ಒಪ್ಪಿಗೆ ಪಡೆದರು. ಇದೇ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚಿನ ಅಂಕ ಗಳಿಸಿ ಬ್ಯಾಂಕಿನ ಸದಸ್ಯ ಬಿ.ಎಸ್. ಶಿವು ಅವರ ಪುತ್ರಿ ಅಮೃತ ವಿದ್ಯಾಲಯದ ವಿದ್ಯಾರ್ಥಿನಿ ಕು. ಲಿಖಿತಾ ಬಿ.ಎಸ್. ಅವರನ್ನು ಸನ್ಮಾನಿಸಿ, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ಕೆ.ಎಂ. ರವಿ ಪ್ರಾರ್ಥಿಸಿದರು. ಹಿರಿಯ ನಿರ್ದೇಶಕ ಬಿ.ಹೆಚ್. ಪರಶುರಾಮಪ್ಪ ಸ್ವಾಗತಿಸಿದರು. ನಿರ್ದೇಶಕ ಎನ್.ವಿ. ಬಂಡಿವಾಡ ವಂದಿಸಿದರು.

ಸಭೆಯಲ್ಲಿ ನಿರ್ದೇಶಕರಾದ ಕೆ.ಎಸ್. ಮಹೇಶ್ವರಪ್ಪ, ಶ್ರೀಮತಿ ಪಂಕಜ ವೀರಯ್ಯ, ವಿಕಾಸ್ ಕುಮಾರ್, ಕೆ.ಆರ್. ರವೀಂದ್ರನಾಥ್, ಶ್ರೀಮತಿ ಆರ್. ಕೌಶಲ್ಯ, ಹೆಚ್.ವಿ. ವಿರೂಪಾಕ್ಷ, ಬಿ.ಜೆ. ಅಭಿಷೇಕ್, ಶ್ರೀಮತಿ ಲತಾ ಹಾಲೇಶ್, ವೃತ್ತಿಪರ ನಿರ್ದೇಶಕರಾದ ಡಾ. ಎಂ. ಸೋಮಶೇಖರಪ್ಪ ಮತ್ತು ಎಂ.ಎಸ್. ಸುಮಂತ್ ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




# ಮಲಯಾಳಂ ಚಿತ್ರರಂಗದಲ್ಲಿ ಮಹಿಳಾ ಪೀಡನೆ ವ್ಯಾಪಕ

## ದನಿ ಎತ್ತಿದವರಿಗೆ ಬೆದರಿಕೆ, ಕುಟುಂಬದವರಿಗೂ ಅಪಾಯ : ನ್ಯಾಯಮೂರ್ತಿ ಹೇಮಾ ಸಮಿತಿ ವರದಿ

ತಿರುವನಂತಪುರಂ, ಆ. 19 - ಮಲಯಾಳಂ ಚಿತ್ರರಂಗದಲ್ಲಿ ಮಹಿಳೆಯರು ವ್ಯಾಪಕವಾಗಿ ಲೈಂಗಿಕ ಪೀಡನೆ ಎದುರಿಸುತ್ತಿದ್ದಾರೆ ಎಂದು ನ್ಯಾಯಮೂರ್ತಿ ಹೇಮಾ ಸಮಿತಿಯ ವರದಿ ತಿಳಿಸಿದೆ.

ಮಹಿಳೆಯರು ಚಿತ್ರರಂಗದಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ಸಮಿತಿ ಬೆಳಕು ಚೆಲ್ಲಿದೆ. ಇದು ಚಿತ್ರರಂಗದಲ್ಲಿ ಮಹಿಳೆಯರ ಸುರಕ್ಷತೆ ಕುರಿತು ಗಮನ ಸೆಳೆದಿದೆ.

ಮಲಯಾಳಂ ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವರದಿ ನೀಡಲು ರಾಜ್ಯ ಸರ್ಕಾರ ಸಮಿತಿಯೊಂದನ್ನು ರಚಿಸಿತ್ತು. 2019ರಲ್ಲಿ ಸಮಿತಿ ವರದಿ ನೀಡಿತ್ತು. ಈ ವರದಿಯಲ್ಲಿ ಮಹಿಳೆಯರು ಎದುರಿಸುತ್ತಿರುವ ಪೀಡನೆ, ಶೋಷಣೆ ಹಾಗೂ ಎದುರಿಸುತ್ತಿರುವ ದುರ್ವ್ಯವಹಾರಗಳ ಕುರಿತ ವಿವರಗಳಿವೆ.

ಮಲಯಾಳಂ ಚಿತ್ರರಂಗದ ಕೆಲ ಹೆಸರಾಂತರು, ಪ್ರತಿಷ್ಠಿತರು, ಕಲಾವಿದರು, ನಿರ್ದೇಶಕರು ಹಾಗೂ ಇತರರು ಮಹಿಳೆಯರನ್ನು ಲೈಂಗಿಕವಾಗಿ ಪೀಡಿಸಿದ್ದಾರೆ. ದೈಹಿಕವಾಗಿ ಅವರನ್ನು ಬಳಸುವ ಪ್ರಯತ್ನ ನಡೆಸಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಐದು ವರ್ಷಗಳ ನಂತರ, ಮಾಹಿತಿ ಹಕ್ಕು ಕಾಯ್ದೆಯಡಿ ವಿವರಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗಿದೆ.

ಚಿತ್ರನಟಿಯರು ಪೀಡನೆಗಳನ್ನು ಎದುರಿಸಿದ್ದಾರೆ. ಆದರೆ, ಹೆದರಿಕೆಯ ಕಾರಣದಿಂದಾಗಿ ಲೈಂಗಿಕ ಪೀಡನೆಗೆ ಗುರಿಯಾದ ಹಲವರು ಪೊಲೀಸರಿಗೆ ದೂರು ನೀಡಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಲೈಂಗಿಕ ಪೀಡನೆ ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ದೊಡ್ಡ ಸಮಸ್ಯೆಯಾಗಿದೆ ಎಂದು ಮೂವರು ಸದಸ್ಯರ ಸಮಿತಿ ತಿಳಿಸಿವೆ. ಹೊಂದಾಣಿಕೆ ಮಾಡಿಕೊಳ್ಳಲು ಸಿದ್ಧವಿರುವ ನಟಿಯರಿಗೆ ಗುಪ್ತನಾಮಗಳನ್ನು ನೀಡಲಾಗುತ್ತದೆ. ಹೊಂದಾಣಿಕೆಗೆ ಸಿದ್ಧವಿಲ್ಲದ ಮಹಿಳೆಯರನ್ನು ಚಿತ್ರರಂಗದಿಂದ ಹೊರದೂಡಲಾಗುತ್ತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮಲಯಾಳಂ ಚಿತ್ರರಂಗದಲ್ಲಿ ಮಹಿಳೆಯರು ಎದುರಿಸಿದ ಲೈಂಗಿಕ ಪೀಡನೆಯ ಕಥೆಗಳನ್ನು ಕೇಳಿ ಆಘಾತವಾಗಿದೆ. ಮಹಿಳೆಯರು ಹೊಂದಿಕೊಳ್ಳಬೇಕು ಹಾಗೂ ಲೈಂಗಿಕ ಬೇಡಿಕೆಗಳಂತೆ ನಡೆದುಕೊಳ್ಳಬೇಕು ಎಂದು ತಿಳಿಸಲಾಗುತ್ತದೆ ಎಂದು ವರದಿ ಹೇಳಿದೆ.

ನಟಿಯರು ಉಳಿದುಕೊಳ್ಳುವ ಹೋಟೆಲ್ ಕೋಣೆಗಳ ಬಾಗಿಲನ್ನು ಪಾನಮತ್ತರು ಬಡಿಯುವ ಘಟನೆಗಳು ನಡೆದಿವೆ. ಈ ರೀತಿ ಬಾಗಿಲು ಪಡೆಯುವುದು ಎಷ್ಟು ಜೋರಾಗಿರುತ್ತದೆ ಎಂದರೆ ಕೆಲವೊಮ್ಮೆ ಬಾಗಿಲೇ ಮುರಿಯುವ ಹೆದರಿಕೆಯಾಗುತ್ತದೆ ಎಂದು ಕೆಲವರು ಸಮಿತಿಗೆ ತಿಳಿಸಿದ್ದಾರೆ.

ಮಹಿಳೆಯರ ಈ ಸಮಸ್ಯೆಗಳ ಬಗ್ಗೆ ನೆರವಾಗಲು ಹಲವು ಕಾಯ್ದೆಗಳಿವೆ. ಆದರೆ, ಮಹಿಳೆಯರು ಹೆದರಿಕೆಯಿಂದ ಮೌನವಾಗಿದ್ದಾರೆ. ಒಂದೊಮ್ಮೆ ಕಲಾವಿದೆಯರು ಈ ಬಗ್ಗೆ ಪೊಲೀಸರಲ್ಲಿ ಇಲ್ಲವೇ ನ್ಯಾಯಾಲಯದಲ್ಲಿ ದೂರು ನೀಡಿದರೂ ಸಾಕಷ್ಟು ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಕೆಲವೊಮ್ಮೆ ಜೀವ ಬೆದರಿಕೆಯೂ ಎದುರಾಗುತ್ತದೆ. ಕಲಾವಿದೆ ಅಷ್ಟೇ ಅಲ್ಲದೆ ಕುಟುಂಬದ ಸದಸ್ಯರು ಸಹ ಅಪಾಯ ಎದುರಿಸುತ್ತಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅಲ್ಲದೆ ದೂರು ನೀಡಿದ ಮರುದಿನವೇ ಸಾಮಾಜಿಕ ಮಾಧ್ಯಮಗಳ ಮೂಲಕ ಸೈಬರ್ ದಾಳಿ ನಡೆಸಲಾಗುತ್ತದೆ. ಮಲಯಾಳಂ ಚಿತ್ರರಂಗವು ಅಪರಾಧಿಕ ತಂಡ ಹಾಗೂ ಕೆಲವೇ ನಿರ್ಮಾಪಕರು, ನಿರ್ದೇಶಕರು ಹಾಗೂ ನಟರ ನಿಯಂತ್ರಣದಲ್ಲಿದೆ ಎಂದು ವರದಿ ತಿಳಿಸಿದೆ.

2017ರಲ್ಲಿ ನಟಿಯೊಬ್ಬರ ಮೇಲೆ ನಡೆದ ಹಲ್ಲೆಯ ಹಿನ್ನೆಲೆಯಲ್ಲಿ ಕೇರಳ ಸರ್ಕಾರ ಸಮಿತಿಯೊಂದನ್ನು ರಚಿಸಿತ್ತು. ಮಲಯಾಳಂ ಚಿತ್ರರಂಗದಲ್ಲಿನ ಲೈಂಗಿಕ ಪೀಡನೆ ಹಾಗೂ ಲಿಂಗ ಅಸಮಾನತೆ ಕುರಿತು ಅಧ್ಯಯನ ನಡೆಸಲು ಸಮಿತಿ ರಚಿಸಲಾಗಿತ್ತು.

## ನಗರದಲ್ಲಿ ಇಂದಿನಿಂದ ರಾಯರ ಆರಾಧನೆ


ಕೆ.ಬಿ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ರಾಯರ ಆರಾಧನಾ ಮಹೋತ್ಸವ ನಡೆಯಲಿದೆ.



ಇಂದು ಶ್ರೀ ಗುರು ರಾಯರ ಪೂರ್ವಾರಾಧನೆ ನಡೆಯಲಿದ್ದು, ಸಂಜೆ 7 ರಿಂದ ನಮನ ಅಕಾಡೆಮಿಯ ಮಾಧವಿ ಗೋಪಾಲಕೃಷ್ಣ ಮತ್ತು ಶಿಷ್ಯ ವೃಂದದಿಂದ ಭರತನಾಟ್ಯ ಪ್ರದರ್ಶನವಿದೆ. ನಾಳೆ ಬುಧವಾರ ಮಧ್ಯಾರಾಧನೆ ಪ್ರಯುಕ್ತ ಸಂಜೆ 6 ರಿಂದ ರಥೋತ್ಸವ, ಅಷ್ಟಾವಧಾನ, 7 ರಿಂದ ಸಂಜೀವ ಜೋಶಿ ಮತ್ತು ತಂಡದವರಿಂದ ಹರಿದಾಸವಾಣಿ ಆಯೋಜಿಸಲಾಗಿದೆ.

ನಾಡಿದ್ದು ದಿನಾಂಕ 22ರ ಗುರುವಾರ ಉತ್ತರಾಧನೆ ಪ್ರಯುಕ್ತ ಬೆಳಿಗ್ಗೆ 10.30 ರಿಂದ ಶ್ರೀ ಮಂತ್ರಾಲಯ ಪ್ರಭುಗಳು ರಚಿಸಿರುವ ಶ್ರೀ ಮನ್ನ್ಯಾಯ ಸುಧಾ ಪರಿಮಳ ಗ್ರಂಥದೊಂದಿಗೆ ಶ್ರೀ ಗುರು ಸಾರ್ವಭೌಮರ ಮಹಾರಥೋತ್ಸವ ಜರುಗಲಿದೆ. ನಂತರ ಸಂಜೆ 6ಕ್ಕೆ ಶುಭದಾ ಮತ್ತು ತಂಡದ 30 ಜನರಿಂದ ವೀಣಾವಾದನ ನಡೆಯಲಿದೆ ಎಂದು ಶ್ರೀ ಗುರುರಾಜ ಸೇವಾ ಸಂಘದ ಪ್ರಕಟಣೆ ತಿಳಿಸಿದೆ.





# ಉಕ್ಕಡಗಾತ್ರಿ : ಸಂಭ್ರಮದ ಅಜ್ಜಯ್ಯನ ಬೆಳ್ಳಿ ರಥೋತ್ಸವ

ಮಲೇಬೆನ್ನೂರು, ಆ.19- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಪುಣ್ಯತಿಥಿ ಅಂಗವಾಗಿ ಅಜ್ಜಯ್ಯನ ಬೆಳ್ಳಿ ರಥೋತ್ಸವ ಮತ್ತು ಪಾಲಿಕೋತ್ಸವವು ಸೋಮವಾರ ಶ್ರದ್ಧಾ - ಭಕ್ತಿಯಿಂದ ಜರುಗಿದವು.

ಶ್ರಾವಣ ಮಾಸದ 3ನೇ ಸೋಮವಾರದಿಂದ ಇಂದು ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಗುರು ಕರಿಬಸವೇಶ್ವರ ಸ್ವಾಮಿಯ ಕರ್ತೃ ಗದ್ದಿಗೆಗೆ ಮಹಾರುದ್ರಾಭಿಷೇಕ ಮತ್ತು ಲೋಕ ಕಲ್ಯಾಣಾರ್ಥವಾಗಿ ಗಣಹೋಮ ಹಾಗೂ ರುದ್ರಹೋಮಗಳು ದಯಾನಂದ ಶಾಸ್ತ್ರಿಗಳ ನೇತೃತ್ವದಲ್ಲಿ ನಡೆದವು.

ನಂತರ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು, ಬೆಳ್ಳಿ ರಥಕ್ಕೆ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಿದರು. ದೇವಸ್ಥಾನ ಆವರಣದಲ್ಲಿ ಜರುಗಿದ ಬೆಳ್ಳಿ ರಥೋತ್ಸವಕ್ಕೆ ವಿವಿಧ ಕಲಾ-ಮೇಳಗಳು ಮೆರೆಗು ತಂದವು.

ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಅಜ್ಜಯ್ಯನಿಗೆ ಭಕ್ತಿ ಸಮರ್ಪಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಗದ್ದಿಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್. ಸುರೇಶ್ ಅವರು, ಇದೇ ದಿನಾಂಕ 23ರ ಶುಕ್ರವಾರ ಬೆಳಿಗ್ಗೆ 8 ಗಂಟೆಯಿಂದಲೇ ನಾಡಿನ ಅನೇಕ ಮಠಾಧೀಶರ ಸಾನ್ನಿಧ್ಯದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ ಹಾಗೂ ಉಚಿತ ಹೊಲಿಗೆ ತರಬೇತಿ ಕೇಂದ್ರಗಳ ಉದ್ಘಾಟನೆ ಮತ್ತು ಸರ್ವಧರ್ಮ ಸಾಮೂಹಿಕ ವಿವಾಹ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಟ್ರಸ್ಟ್ ಕಮಿಟಿ ನಿರ್ದೇಶಕರಾದ ಕೊಟೇರ್ ಪ್ರಕಾಶ್, ಬಸವನಗೌಡ, ಹೊಸಳ್ಳಿ ಗದಿಗೆಪ್ಪ, ರಾಮನಗೌಡ್ರ ಗದಿಗೆಪ್ಪ ಮತ್ತು ಯುವ ಕಲಾವಿದ ಅಜಯ್ ಸೇರಿದಂತೆ ಗ್ರಾಮದ ಪ್ರಮುಖರು, ಭಕ್ತರು ಹಾಜರಿದ್ದರು.

**ಪಾಲಿಕೋತ್ಸವ :** ಸೋಮವಾರ ರಾತ್ರಿ ಅಜ್ಜಯ್ಯನ ಪಾಲಿಕೋತ್ಸವವು ಹೂವುಗಳಿಂದ ಅಲಂಕೃತಗೊಂಡ ವಾಹನದಲ್ಲಿ ಸಂಭ್ರಮದಿಂದ ನೆರವೇರಿತು. ನಂದಿಗುಡಿ ಶ್ರೀಗಳ ಪಾಲಿಕೋತ್ಸವಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಪಟಾಕಿ ಸಿಡಿತ ಬಾನಂಗಳದಲ್ಲಿ ಬಣ್ಣ ಬಣ್ಣದ ಚಿತ್ತಾರ ಮೂಡಿಸಿ, ಎಲ್ಲರ ಗಮನ ಸೆಳೆದವು.

## ಸಿದ್ದರಾಮಯ್ಯ ಬೆಂಬಲಿಸುವ ಪತ್ರಿಕಾಗೋಷ್ಠಿಯಲ್ಲಿ ಹೃದಯಾಘಾತದಿಂದ ಸಾವು

ಬೆಂಗಳೂರು, ಆ. 19 – ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ ರಾಜ್ಯಪಾಲರ ವಿರುದ್ಧ ಪತ್ರಿಕಾಗೋಷ್ಠಿ ನಡೆಸುತ್ತಿದ್ದ ವೇಳೆ ಕೋಲಾರದ ಕಾಂಗ್ರೆಸ್ ಮುಖಂಡರೊಬ್ಬರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಸಂಘದ ವತಿಯಿಂದ ಸೋಮವಾರ ಪತ್ರಿಕಾಗೋಷ್ಠಿ ನಡೆಯುತ್ತಿತ್ತು. ಈ ವೇಳೆ ಕೋಲಾರ ಕಾಂಗ್ರೆಸ್ ಮುಖಂಡ ಸಿ.ಕೆ. ರವಿಚಂದ್ರನ್ ಅವರು ಮಾತನಾಡುತ್ತಿದ್ದರು.

ಮಾತನಾಡುವಾಗಲೇ ಅವರು ಕುರ್ಚಿಯಿಂದ ಕುಸಿದು ಬಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಆಸ್ಪತ್ರೆ ಮಾರ್ಗದಲ್ಲೇ ಅವರು ಸಾವನ್ನಪ್ಪಿದ್ದಾರೆ. ಕೋಲಾರದ ಚಿಂತಾಮಣಿ ಮೂಲದ ರವಿಚಂದ್ರನ್, ಬೆಂಗಳೂರಿನಲ್ಲಿ ವಾಸವಾಗಿದ್ದರು.

## ಮಮತಾ ರಾಜೀನಾಮೆ ಕೇಳುವವರ ಬೆರಳು ಮುರಿತೀವಿ ಎಂದ ಸಚಿವ ಉದಯನ್

ಕೊಲ್ಕೊತಾ, ಆ. 19 - ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ರಾಜೀನಾಮೆ ಕೇಳುವವರ ಬೆರಳುಗಳನ್ನು ಮುರಿಯಲಾಗುವುದು ಎಂದು ತೃಣಮೂಲ ಕಾಂಗ್ರೆಸ್ ಹಿರಿಯ ಸಚಿವ ಉದಯನ್ ಗುಹಾ ಬೆದರಿಕೆ ಹಾಕಿದ್ದಾರೆನ್ನಲಾದ ವಿಡಿಯೋ ವೈರಲ್ ಆಗಿದೆ.

ಮಮತಾ ಬ್ಯಾನರ್ಜಿ ಅವರ ವಿರುದ್ಧ ವಾಗ್ದಾಳಿ ನಡೆಸುವವರು, ಅವರ ಕಡೆ ಬೆರಳು ತೋರಿಸುವವರು ಹಾಗೂ ಅವರ ರಾಜೀನಾಮೆ ಕೇಳುವವರು ಎಂದೂ ಯಶಸ್ವಿಯಾಗುವುದಿಲ್ಲ. ಅವರ ಕಡೆ ಬೆರಳು ತೋರಿಸುವವರ ಬೆರಳುಗಳನ್ನು ಮುರಿಯಲಾಗುವುದು ಎಂದು ಸಚಿವರು ಹೇಳಿರುವ ದೃಶ್ಯ ವಿಡಿಯೋದಲ್ಲಿದೆ.ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ವೈದ್ಯೆಯ ಮೇಲೆ ಅತ್ಯಾಚಾರ ಹಾಗೂ ಹತ್ಯೆ ನಡೆದ ಹಿನ್ನೆಲೆಯಲ್ಲಿ ದೇಶಾದ್ಯಂತ ಆಕ್ರೋಶ ಉಂಟಾಗಿದೆ. ಈ ಪ್ರಕರಣದ ಹಿನ್ನೆಲೆಯಲ್ಲಿ ಮಮತಾ ರಾಜೀನಾಮೆ ನೀಡಬೇಕು ಎಂಬ ಒತ್ತಾಯ ಕೇಳಿ ಬಂದಿದೆ.

## ಉಗ್ರರ ದಾಳಿಗೆ ಸಿಆರ್‌ಪಿಎಫ್ ಇನ್ಸ್‌ಪೆಕ್ಟರ್ ಸಾವು

ಜಮ್ಮು, ಆ. 19 – ಜಮ್ಮು ವಲಯದ ಉಧಾಂಪುರ್ ಜಿಲ್ಲೆಯಲ್ಲಿ ಗಸ್ತಿನಲ್ಲಿದ್ದ ಭದ್ರತಾ ಸಿಬ್ಬಂದಿ ಮೇಲೆ ಉಗ್ರರು ಗುಂಡು ಹಾರಿಸಿದ್ದು ಸಿ.ಆರ್.ಪಿ.ಎಫ್. ಇನ್ಸ್‌ಪೆಕ್ಟರ್ ಒಬ್ಬರು ಸಾವನ್ನಪ್ಪಿದ್ದಾರೆ.

ಮಧ್ಯಾಹ್ನ 3.30ರ ಸಮಯದಲ್ಲಿ ಬಸಂತಗರ್ ಪ್ರದೇಶದ ದುಡು ಎಂಬ ದುರ್ಗಮ ಪ್ರದೇಶದಲ್ಲಿ ದಾಳಿ ನಡೆಸಲಾಗಿದೆ. ದಾಳಿಗೆ ಸಿಲುಕಿ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಇನ್ಸ್‌ಪೆಕ್ಟರ್ ಕುಲದೀಪ್ ಕುಮಾರ್ ಅವರು ಸಾವನ್ನಪ್ಪಿದ್ದಾರೆ. ಭದ್ರತಾ ಪಡೆಗಳು ಪ್ರತಿ ದಾಳಿ ಆರಂಭಿಸಿದವು. ನಂತರ ಉಗ್ರರು ಅಲ್ಲಿಂದ ಪರಾರಿಯಾಗಿದ್ದಾರೆ. ಉಗ್ರರನ್ನು ಶೋಧಿಸಿ ನಿಷ್ಕ್ರಿಯಗೊಳಿಸಲು ಕಾರ್ಯಾಚರಣೆ ನಡೆಸಲಾಗುತ್ತಿದೆ.


## ವಿದೇಶ ಪ್ರವಾಸ - ಶುಭ ಹಾರೈಕೆ





ಕೆ.ಹೆಚ್ ರಾಘವೇಂದ್ರ   ಸಂಪತ್‌ಕುಮಾರ್ ಎಸ್. ಮಠ್

ಇವರು ಕೋಟಕ್ ಮಹೀಂದ್ರ ಲೈಫ್ ಇನ್ಸೂರೆನ್ಸ್, ದಾವಣಗೆರೆ ಶಾಖೆ ವತಿಯಿಂದ ಲೈಫ್ ಇನ್ಸೂರೆನ್ಸ್ ನಲ್ಲಿ ಮಾಡಿದ ಸಾಧನೆಗಾಗಿ ದಿನಾಂಕ : 20.8.2024 ರ ಮಂಗಳವಾರ ಬೆಳಿಗ್ಗೆ ಬೆಂಗಳೂರು ಮೂಲಕ ಬ್ಯಾಂಕಾಕ್ ಪ್ರವಾಸ ಕೈಗೊಂಡಿದ್ದಾರೆ. ಇವರ ಪ್ರವಾಸ ಸುಖಕರವಾಗಿರಲಿ ಹಾಗೂ ಕ್ಷೇಮವಾಗಿರಲೆಂದು ಶುಭ ಹಾರೈಸುತ್ತೇವೆ.

✦ ಕೆ.ಶಶಿಧರ್ LMP ✦ ಪ್ರಸಾದ್ ಎಸ್.ರಾಯ್ಕರ್ ✦ ಶ್ರೀಧರ್ ಸಿ.
✦ ಬಿ.ಹೆಚ್. ಸತೀಶ್, ಸೀನಿಯರ್ ಏಜೆನ್ಸಿ ಪಾರ್ಟ್‌ನರ್.
✦ ಪದ್ಮಪ್ರಿಯ, ✦ ಪದ್ಮ ಎ. ✦ ಲಿಂಗನಗೌಡ ಪಿ.
✦ ಪ್ರಕಾಶ ಎ. ✦ ಲಕ್ಷ್ಮಣ್ ಸಿ. ✦ ಮಲ್ಲಿಕಾರ್ಜುನ
✦ ಕೋಟಕ್ ಮಹೀಂದ್ರ ಲೈಫ್ ಇನ್ಸೂರೆನ್ಸ್, ದಾವಣಗೆರೆ ಶಾಖೆ

## ತೃತೀಯ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ಬನ್ನೇರ ಬಸಮ್ಮನವರು

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಪತಿ : ✦ ಕೋಡಿ ಬಸಪ್ಪ, ನಿವೃತ್ತ ಇಂಜಿನಿಯರ್ ದೂಡಾ.
ಮಕ್ಕಳಾದ : ✦ ಕೆ.ಬಿ. ಸುರೇಶ್, ವಕೀಲರು, ದಾವಣಗೆರೆ.
✦ ಕೆ.ಬಿ. ವೆಂಕಟೇಶ್, ಪ್ರಥಮ ದರ್ಜೆ ಗುತ್ತಿಗೆದಾರರು
✦ ಕೆ.ಬಿ. ಸಿದ್ದೇಶ್, ಪ್ರಥಮ ದರ್ಜೆ ಗುತ್ತಿಗೆದಾರರು
✦ ಕೆ.ಬಿ. ಹಾಲೇಶ್, ಶ್ರೀ ಸಾಯಿ ಲೂಬ್ಸ್, ದಾವಣಗೆರೆ.
✦ ಕೆ.ಬಿ. ಹರೀಶ್, ಮಹೇಶ್ ಮಾರ್ಕೆಟಿಂಗ್

ಕೋಡಿ ವಂಶಸ್ಥರು, ಬನ್ನೇರ ವಂಶಸ್ಥರು ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.





KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas